ನಮಾಝ್

(ಹನಫೀ ಕ್ರಮ)

✍ ಅಬ್ದುಸ್ಸಲಾಮ್ ಪುತ್ತಿಗೆ

ಪರಮದಯಾಮಯ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ನಮಾಝ್ ಪ್ರತಿಯೊಬ್ಬ ಮುಸ್ಲಿಮನ ಮೇಲೆ ಕಡ್ಡಾಯ. ಆದ್ದರಿಂದ ನಮಾಝ್‌ಗೆ ಸಂಬಂಧಿಸಿದ ವಿವರಗಳನ್ನೆಲ್ಲಾ ತಿಳಿದಿರಬೇಕಾದುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯ. ನಮಾಝ್‌ನ ವಿಧಾನ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಮೂಲತಃ ಪ್ರವಾದಿವರ್ಯರೇ(ಸ) ಒದಗಿಸಿರುವರು. ಆದರೆ ಕೆಲವು ವಿಷಯಗಳಲ್ಲಿ ಪರಸ್ಪರ ಭಿನ್ನವಾದ ಹದೀಸ್‌ಗಳಿದ್ದು ಈ ಪೈಕಿ ಯಾವುದನ್ನು ಅನುಸರಿಸಬೇಕೆಂದು ನಿರ್ಧರಿಸುವುದು ಜನಸಾಮಾನ್ಯನಿಗೆ ಸುಲಭಸಾಧ್ಯವಲ್ಲ. ಆದ್ದರಿಂದಲೇ ಇಮಾಮ್ ಅಬೂ ಹನೀಫಾ(ರ), ಇಮಾಮ್ ಶಾಫಿಈ(ರ) ಮುಂತಾದ ಗತಕಾಲದ ಘನ ಮುಸ್ಲಿಮ್ ವಿದ್ವಾಂಸರು ವಿವಿಧ ವಿಷಯಗಳ ಕೂಲಂಕಷ ಪರಾಮರ್ಶೆ ನಡೆಸಿ ಆ ಕುರಿತು ತೀರ್ಪುಗಳನ್ನು ನೀಡಿರುವರು. ಇಂತಹ ವಿದ್ವಾಂಸರ ತೀರ್ಪುಗಳ ಕ್ರೋಡೀಕೃತ ರೂಪವೇ ನಾಲ್ಕು ಕರ್ಮಶಾಸ್ತ್ರಗಳು.

ಈ ಪೈಕಿ ಶಾಫಿಈ ಕರ್ಮಶಾಸ್ತ್ರದ ಆಧಾರದಲ್ಲಿ ನಮಾಝ್‌ಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ವಿಶೇಷವಾಗಿ ಕಿರಿಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಕಟಿಸಲಾಗಿತ್ತು. ಇದೀಗ ಹನಫೀ ಕರ್ಮಶಾಸ್ತ್ರದ ಆಧಾರದಲ್ಲಿ ಅಂತಹದೇ ಒಂದು ಕಿರುಹೊತ್ತಗೆಯನ್ನು ಪ್ರಕಟಿಸುತ್ತಿದ್ದೇವೆ. ಈ ಕೃತಿಯ ರಚನೆಯಲ್ಲಿ ಮುಖ್ಯವಾಗಿ ಮೌಲಾನಾ ಮುಫ್ತಿ ಮುಹಮ್ಮದ್ ಕಿಫಾಯತುಲ್ಲಾ(ರ) ಅವರ 'ತಾಲೀಮುಲ್ ಇಸ್ಲಾಮ್', ಮೌಲಾನಾ ಮುಹಮ್ಮದ್ ಯೂಸುಫ್ ಇಸ್ಲಾಹಿ ಅವರ 'ಫಿಕ್ಹ್ ಇಸ್ಲಾಮಿ' (ಭಾಗ-1) ಮತ್ತು ಮೌಲಾನಾ ಅಬ್ದುಶ್ಶಕೂರ್ ಫಾರೂಕಿ(ರ) ಅವರ 'ಇಲ್ಮುಲ್ ಫಿಕ್ಹ್' ಎಂಬ ಗ್ರಂಥಗಳಿಂದ ಮಾಹಿತಿ ಪಡೆಯಲಾಗಿದೆ. ಈ ಹೊತ್ತಗೆಯಲ್ಲಿರುವ ವಿಷಯಗಳನ್ನೆಲ್ಲಾ ಪ್ರಸ್ತುತ ಗ್ರಂಥಗಳಿಂದಲೇ ಆರಿಸಿಕೊಳ್ಳಲಾಗಿದ್ದು, ಸಂಗ್ರಹಕಾರ ತನ್ನ ಯಾವುದೇ ವೈಯಕ್ತಿಕ ಅಭಿಪ್ರಾಯವನ್ನು ಇದರಲ್ಲಿ ಸೇರಿಸಿಲ್ಲ. ಅಲ್ಲಾಹನು ಈ ಕೃತಿಯನ್ನು ಜ್ಞಾನಾರ್ಥಿಗಳ ಪಾಲಿಗೆ ಉಪಯುಕ್ತವಾಗಿ ಮಾಡಲೆಂದು ಪ್ರಾರ್ಥಿಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

إِنَّ الصَّلٰوةَ تَنْهٰى عَنِ
الْفَحْشَآءِ وَالْمُنْكَرِ ۗ وَلَذِكْرُ اللّٰهِ اَكْبَرُ ۗ
وَاللّٰهُ يَعْلَمُ مَا تَصْنَعُوْنَ ﴿٤٥﴾

"ನಿಶ್ಚಯವಾಗಿಯೂ ನಮಾಝ್ ಅಶ್ಲೀಲತೆಯಿಂದಲೂ ದುಷ್ಕರ್ಮದಿಂದಲೂ ತಡೆಯುತ್ತದೆ ಮತ್ತು ಅಲ್ಲಾಹನ ಸ್ಮರಣೆಯಾದರೋ ಇದಕ್ಕಿಂತಲೂ ಬಹಳ ದೊಡ್ಡದಾಗಿದೆ. ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ."

(ಪವಿತ್ರ ಕುರ್‌ಆನ್, 29:45)

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಅಲ್ಲಾಹನ ದಾಸನಿಂದ ಕಿಯಾಮತ್‌ನ ದಿನ ಮೊಟ್ಟ ಮೊದಲು ವಿಚಾರಣೆಯಾಗುವುದು ನಮಾಝ್‌ನ ಕುರಿತಾಗಿದೆ. ಅದು ಸರಿಯಾಗಿದ್ದರೆ ಅವನ ಇತರೆಲ್ಲ ಕರ್ಮಗಳೂ ಸರಿಯಾಗಿರುವುವು ಮತ್ತು ಅದು ಸರಿಯಾಗಿರದಿದ್ದರೆ ಅವನ ಉಳಿದೆಲ್ಲ ಕರ್ಮಗಳೂ ತಪ್ಪಾಗಿರುವುವು."

(ವರದಿ: ಹ. ಅಬ್ದುಲ್ಲಾ ಬಿನ್ ಕುರ್ತ್(ರ)-ತಬ್ರಾನೀ)

بسم الله الرحمن الرحيم

ನಮಾಝ್‌ನ ಮಹತ್ವ

ಇಸ್ಲಾಮಿನ ಆಧಾರ ಸ್ತಂಭಗಳ ಪೈಕಿ ಎರಡನೆಯ ಸ್ತಂಭವೇ ನಮಾಝ್. ಇದು ಸಕಲ ಸತ್ಕರ್ಮಗಳ ಉಗಮ ಬಿಂದುವಾಗಿದೆ.

ಪ್ರವಾದಿ ಮುಹಮ್ಮದ್(ಸ) ಹೇಳಿರುವರು:

"ನಮಾಝ್ ಧರ್ಮದ ಆಧಾರ ಸ್ತಂಭವಾಗಿದೆ. ನಮಾಝನ್ನು ಸಂಸ್ಥಾಪಿಸಿದವನು ಸಂಪೂರ್ಣ ಧರ್ಮವನ್ನು ಸಂಸ್ಥಾಪಿಸಿದನು. ನಮಾಝನ್ನು ಕೆಡವಿದವನು(ತೊರೆದವನು) ಸಂಪೂರ್ಣ ಧರ್ಮವನ್ನು ಕೆಡವಿದನು."

ನಮಾಝ್ ಮನುಷ್ಯನನ್ನು ದುಷ್ಕರ್ಮ ಹಾಗೂ ಅಶ್ಲೀಲ ಕೃತ್ಯಗಳಿಂದ ರಕ್ಷಿಸುತ್ತದೆ. ನಮಾಝ್‌ನಿಂದಾಗಿ ನಮ್ಮಲ್ಲಿ ಸನ್ಮಾರ್ಗದಲ್ಲಿ ನಡೆಯುವ ಸಾಮರ್ಥ್ಯವುಂಟಾಗುತ್ತದೆ. ಆದ್ದರಿಂದಲೇ ಪವಿತ್ರ ಕುರ್‌ಆನಿನಲ್ಲಿ "ನೀವು ನಮಾಝ್ ಮತ್ತು ಸಹನೆಯಿಂದ ಸಹಾಯ ಪಡೆಯಿರಿ" ಎಂದು ಹೇಳಲಾಗಿದೆ.

ಒಬ್ಬ ವ್ಯಕ್ತಿ ಮುಸ್ಲಿಮನಾದ ಬಳಿಕ ಅವನ ಮೇಲೆ ಪ್ರಥಮವಾಗಿ ನಮಾಝ್‌ನ ಸಂಸ್ಥಾಪನೆ ಕಡ್ಡಾಯವಾಗುತ್ತದೆ. ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿರುವನು:

"ನಿಸ್ಸಂದೇಹವಾಗಿ ನಾನೇ ಅಲ್ಲಾಹನು. ನನ್ನ ಹೊರತು ಆರಾಧನೆಗೆ ಅರ್ಹರಾದವರು ಬೇರೆ ಯಾರೂ ಇಲ್ಲ. ಆದ್ದರಿಂದ ನನ್ನನ್ನೇ ಆರಾಧಿಸಿರಿ ಮತ್ತು ನನ್ನ ಸ್ಮರಣೆಗಾಗಿ ನಮಾಝನ್ನು ಸಂಸ್ಥಾಪಿಸಿರಿ."

ವುಝೂ ಮಾಡುವ ಕ್ರಮ

ವುಝೂವಿನ ಫರ್ಝ್(ಕಡ್ಡಾಯ ವಿಧಿ)ಗಳು

ಶರೀರ ಶುದ್ಧಿಗಾಗಿ ವುಝೂ ಮಾಡಬೇಕಾದುದು ಅಗತ್ಯ. ವುಝೂ ಸಿಂಧುವಾಗಬೇಕಿದ್ದರೆ ಅದರಲ್ಲಿ ಕಡ್ಡಾಯವಾಗಿ ನಾಲ್ಕು ವಿಧಿಗಳನ್ನು ಪಾಲಿಸಬೇಕು:

1. ಮುಖವನ್ನು ಪೂರ್ಣವಾಗಿ, ಕನಿಷ್ಠಪಕ್ಷ ಒಂದು ಸಲ ತೊಳೆಯಬೇಕು. ಮುಖವೆಂದರೆ ಹಣೆಯಲ್ಲಿ ಕೂದಲು ಆರಂಭವಾಗುವಲ್ಲಿಂದ ಗದ್ದದ ಕೆಳಗಿನ ತನಕ ಮತ್ತು ಒಂದು ಕಿವಿಯ ಆರಂಭ ಬಿಂದುವಿನಿಂದ ಇನ್ನೊಂದು ಕಿವಿಯ ಆರಂಭ ಬಿಂದುವಿನ ವರೆಗೆ.
2. ಎರಡೂ ಕೈಗಳನ್ನು ಮೊಣ ಕೈಗಳ ಸಹಿತ ಕನಿಷ್ಠಪಕ್ಷ ಒಂದು ಸಲ ತೊಳೆಯುವುದು.
3. ತಲೆಯ ನಾಲ್ಕನೆಯ ಒಂದು ಭಾಗವನ್ನು (ಒದ್ದೆಯಾದ ಹಸ್ತಗಳಿಂದ) ಒಂದು ಸಲ ಸವರುವುದು.
4. ಎರಡೂ ಕಾಲುಗಳನ್ನು ಮಣಿಗಂಟುಗಳ ಸಹಿತ ಕನಿಷ್ಠಪಕ್ಷ ಒಂದು ಸಲ ತೊಳೆಯುವುದು.

   ಪ್ರಸ್ತುತ ಭಾಗಗಳಲ್ಲಿ, ಒಂದು ಕೂದಲೆಳೆಯಷ್ಟು ಸ್ಥಳವೂ ಒಣಗಿದ ಸ್ಥಿತಿಯಲ್ಲಿ ಉಳಿಯದಂತೆ ಬಹಳ ಎಚ್ಚರಿಕೆಯಿಂದ ತೊಳೆಯಬೇಕು.

ವುಝೂವಿನ ಸುನ್ನತ್(ಐಚ್ಛಿಕ ಕರ್ಮ)ಗಳು

ವುಝೂವಿನಲ್ಲಿ 15 ಸುನ್ನತ್‌ಗಳಿದ್ದು ವುಝೂ ಮಾಡುವಾಗ ಆ ಎಲ್ಲ ಸುನ್ನತ್‌ಗಳನ್ನೂ ಪಾಲಿಸಬೇಕು. ಆ 15 ಸುನ್ನತ್‌ಗಳ ವಿವರ ಹೀಗಿದೆ:

1. ಅಲ್ಲಾಹನು ತನ್ನ ಈ ಕರ್ಮವನ್ನು ಸ್ವೀಕರಿಸಲಿ ಮತ್ತು ಪರಲೋಕದಲ್ಲಿ ತನಗೆ ಈ ಕರ್ಮದ ಪುಣ್ಯ ಫಲ ಸಿಗಲಿ ಎಂಬ ಸಂಕಲ್ಪ ಮಾಡಿಕೊಳ್ಳುವುದು.
2. "ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್" ಎಂದು ಉಚ್ಚರಿಸಿ ವುಝೂ ಆರಂಭಮಾಡುವುದು.
3. ಮುಖ ತೊಳೆಯುವುದಕ್ಕೆ ಮುಂಚೆ ಎರಡೂ ಹಸ್ತಗಳನ್ನು ಮಣಿಗಂಟುಗಳ ತನಕ ತೊಳೆದುಕೊಳ್ಳುವುದು.
4. ಮೂರು ಸಲ ಬಾಯಿ ಮುಕ್ಕಳಿಸುವುದು.
5. ಹಲ್ಲುಜ್ಜುವುದು.
6. ಮೂರು ಸಲ ಮೂಗಿನೊಳಗೆ ನೀರು ಹರಿಸುವುದು.

7. ಗಡ್ಡದ ರೋಮಗಳ ನಡುವೆ ಬೆರಳು ತೂರಿ ಉಜ್ಜುವುದು.
8. ಎರಡೂ ಕೈ ಮತ್ತು ಕಾಲುಗಳ ಬೆರಳುಗಳ ನಡುವೆ ಬೆರಳು ತೂರಿ ಉಜ್ಜುವುದು.
9. ಸಂಪೂರ್ಣ ತಲೆಯನ್ನು ಸವರಿಕೊಳ್ಳುವುದು.
10. ಎರಡೂ ಕಿವಿಗಳನ್ನು ಸವರಿಕೊಳ್ಳುವುದು.
11. ಸುನ್ನತ್ ವಿಧಾನವನ್ನು ಪಾಲಿಸುತ್ತಾ ವುಝೂ ಮಾಡುವುದು.
12. ಅಂಗಾಂಗಗಳನ್ನು ತೊಳೆಯುವಾಗ ಮೊದಲು ಬಲಭಾಗದ ಅಂಗಗಳನ್ನೂ ಆ ಬಳಿಕ ಎಡಭಾಗದ ಅಂಗಗಳನ್ನೂ ತೊಳೆಯುವುದು.
13. ಒಂದು ಅಂಗವನ್ನು ತೊಳೆದ ಬಳಿಕ ತಕ್ಷಣವೇ ಇನ್ನೊಂದು ಅಂಗವನ್ನು ತೊಳೆಯುವುದು.
14. ಪ್ರತಿಯೊಂದು ಅಂಗವನ್ನೂ ಮೂರು ಬಾರಿ ತೊಳೆಯುವುದು.
15. ವುಝೂ ಮುಗಿದ ಬಳಿಕ ಸುನ್ನತ್ ಪ್ರಕಾರ ದುಆ ಮಾಡುವುದು.

ವುಝೂ ಮಾಡಿದ ಬಳಿಕ ಹೇಳುವ ದುಆ

ವುಝೂ ಮಾಡಿದ ಬಳಿಕ ಆಕಾಶದೆಡೆಗೆ ದೃಷ್ಟಿ ಮಾಡಿ ಈ ರೀತಿ ದುಆ(ಪ್ರಾರ್ಥನೆ) ಮಾಡುವುದು ಸುನ್ನತ್ ಆಗಿರುತ್ತದೆ:

اَشْهَدُ اَنْ لَّآ اِلٰـهَ اِلَّا اللّٰهُ وَحْدَهُ لَا شَرِيْكَ لَهُ وَاَشْهَدُ اَنَّ مُحَمَّدًا عَبْدُهُ
وَرَسُوْلُهُ اَللّٰهُمَّ اجْعَلْنِىْ مِنَ التَّوَّابِيْنَ وَاجْعَلْنِىْ مِنَ الْمُتَطَهِّرِيْنَ

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕಲಹೂ ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ. ಅಲ್ಲಾಹುಮ್ಮ ಜ್‌ಅಲ್ನೀ ಮಿನತ್ತವ್ವಾಬೀನ ವಜ್‌ಅಲ್ನೀ ಮಿನಲ್ ಮುತತಹ್ಹಿರೀನ್."

(ನಾನು ಸಾಕ್ಷ್ಯವಹಿಸುತ್ತೇನೆ: ಅಲ್ಲಾಹನ ಹೊರತು ಬೇರೆ ಆರಾಧ್ಯರಿಲ್ಲ. ಅವನು ಏಕಮಾತ್ರನು. ಅವನಿಗೆ ಯಾರೂ ಭಾಗೀದಾರರಿಲ್ಲ ಮತ್ತು ನಾನು ಸಾಕ್ಷ್ಯವಹಿಸುತ್ತೇನೆ: ಮುಹಮ್ಮದ್(ಸ) ಅಲ್ಲಾಹನ ದಾಸ ಮತ್ತು ಸಂದೇಶವಾಹಕರಾಗಿದ್ದಾರೆ. ಓ ಅಲ್ಲಾಹ್! ನನ್ನನ್ನು ಅತ್ಯಧಿಕ ತೌಬಾ ಮಾಡುವವರ(ಪಾಪಗಳಿಗೆ ಪಶ್ಚಾತ್ತಾಪ ಪಟ್ಟು, ಕ್ಷಮೆ ಯಾಚಿಸಿ ಅಲ್ಲಾಹನಿಗೆ ಸದಾ ಶರಣಾಗುವವರ) ಸಾಲಿಗೆ ಸೇರಿಸು ಮತ್ತು ನನ್ನನ್ನು ಅತ್ಯಂತ ಶುದ್ಧ ಹಾಗೂ ನಿರ್ಮಲವಾಗಿರುವವರ ಸಾಲಿಗೆ ಸೇರಿಸು.)

ಅಥವಾ ಹೀಗೂ ಪ್ರಾರ್ಥನೆ ಮಾಡಬಹುದು:

سُبْحَانَكَ اَللّٰهُمَّ وَبِحَمْدِكَ اَشْهَدُ اَنْ لَّآ اِلٰهَ اِلَّآ اَنْتَ،
اَسْتَغْفِرُكَ وَاَتُوْبُ اِلَيْكَ

"ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ಅಶ್‌ಹದು ಅಲ್ಲಾಇಲಾಹ ಇಲ್ಲಾ ಅಂತ ಅಸ್‌ತಗ್‌ಫಿರುಕ ವಅತೂಬು ಇಲೈಕ."

(ಓ ಅಲ್ಲಾಹ್! ನೀನು ಅತ್ಯಂತ ಪಾವನನಾಗಿರುವೆ ಮತ್ತು ಅತ್ಯಂತ ಪ್ರಶಂಸಾರ್ಹನಾಗಿರುವೆ. ನಿನ್ನ ಹೊರತು ಬೇರೆ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ. ನಾನು ನಿನ್ನಿಂದ ಕ್ಷಮೆಯನ್ನು ಬೇಡುತ್ತೇನೆ ಮತ್ತು ನಿನಗೆ ಶರಣಾಗಿ ನಿನ್ನೆಡೆಗೆ ಮರಳುತ್ತೇನೆ.)

ಮುಸ್ತಹಬ್‌ಗಳು

ವುಝೂ ಮಾಡುವಾಗ ಈ ಕೆಳಗಿನ ಅಂಶಗಳ ಪಾಲನೆ ಮುಸ್ತಹಬ್ ಅಥವಾ ಪ್ರಶಂಸನೀಯವಾಗಿದೆ. ಇವುಗಳನ್ನು ಪಾಲಿಸದಿದ್ದರೆ ಪಾಪವಾಗುವುದಿಲ್ಲ. ಆದರೆ ಪಾಲಿಸುವುದು ಪುಣ್ಯದಾಯಕ.

1. ತುಸು ಎತ್ತರದ ಸ್ಥಳದಲ್ಲಿ ಕುಳಿತುಕೊಳ್ಳುವುದು ಮತ್ತು ನೀರ ಹನಿಗಳು ನೆಲದಿಂದ ಚಿಮ್ಮಿ ಶರೀರ ಅಥವಾ ವಸ್ತ್ರಕ್ಕೆ ತಗಲದಂತೆ ಎಚ್ಚರವಹಿಸುವುದು.
2. ಕಿಬ್ಲಾದ ಕಡೆಗೆ ಮುಖ ಮಾಡಿ ಕುಳಿತು ವುಝೂ ಮಾಡುವುದು.
3. ವುಝೂ ಮಾಡುವಾಗ ಅನಗತ್ಯವಾಗಿ ಯಾರಿಂದಲೂ ಸಹಾಯ ಪಡೆಯದೆ ಇರುವುದು. ಅಂದರೆ ಸ್ವತಃ ನೀರು ತೆಗೆದುಕೊಂಡು, ತನ್ನ ಅಂಗಾಂಗಗಳನ್ನು ತಾನೇ ತೊಳೆಯಬೇಕು. (ಯಾರಾದರೂ ತಾವೇ ಮುಂದೆ ಬಂದು ನೀರು ಒದಗಿಸಿದರೆ ಅಥವಾ ಯಾವುದಾದರೂ ಅನಾರೋಗ್ಯದ ಕಾರಣ ಯಾವುದಾದರೂ ಅಂಗವನ್ನು ಇತರರು ತೊಳೆದರೆ ಅಥವಾ ತೊಳೆಯಲು ಸಹಾಯ ಮಾಡಿದರೆ ತಪ್ಪಿಲ್ಲ.)
4. ಬಾಯಿ ಮುಕ್ಕಳಿಸಲು ಹಾಗೂ ಮೂಗಿನೊಳಗೆ ನೀರು ಹರಿಸಲು ಬಲಗೈಯನ್ನು ಬಳಸುವುದು.
5. ಮೂಗು ಶುಚಿ ಮಾಡಲು ಎಡಗೈಯನ್ನು ಬಳಸುವುದು.
6. ಕಾಲು ತೊಳೆಯುವಾಗ ಬಲಗೈಯಿಂದ ನೀರು ಸುರಿದು ಎಡಗೈಯಿಂದ ಕಾಲನ್ನು ಉಜ್ಜುವುದು.
7. ಅಂಗಾಂಗಗಳನ್ನು ತೊಳೆಯುವಾಗ, ಯಾವುದೇ ಮಾಲಿನ್ಯ ಉಳಿಯದಂತೆ ಮತ್ತು ಯಾವುದೇ ಭಾಗವು ಶುಷ್ಕವಾಗಿ ಉಳಿಯದಂತೆ ಸರಿಯಾಗಿ ತಿಕ್ಕಿ ತೊಳೆಯುವುದು.
8. ಸುನ್ನತ್‌ನ ಪ್ರಕಾರ ಇರುವ ದುಆಗಳನ್ನು ಪಠಿಸುವುದು.

ವುಝೂ ಆರಂಭಿಸುವಾಗ "ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್" ಎಂದು ಉಚ್ಚರಿಸಿ ಈ ಕೆಳಗಿನ ದುಆ ಓದಬಹುದು:

اَللّٰهُمَّ اغْفِرْلِی ذَنْبِی وَوَسِّعْ لِی فِی دَارِی وَبَارِكْ لِی فِی رِزْقِی

"ಅಲ್ಲಾಹುಮ್ಮಗ್‌ಫಿರ್‌ಲೀ ದಂಬೀ, ವ ವಸ್ಸಿಅ್‌ಲೀ ಫೀ ದಾರೀ ವಬಾರಿಕ್‌ಲೀ ಫೀ ರಿಝ್‌ಕೀ."

(ಓ ಅಲ್ಲಾಹ್! ನನ್ನ ಪಾಪಗಳನ್ನು ಕ್ಷಮಿಸು, ನನ್ನ ನಿವಾಸವನ್ನು ನನ್ನ ಪಾಲಿಗೆ ವಿಶಾಲಗೊಳಿಸು. ನನ್ನ ಆಹಾರ(ಜೀವನಾಧಾರ)ದಲ್ಲಿ ಸಮೃದ್ಧಿಯನ್ನು ದಯಪಾಲಿಸು.)

ಮಕ್ರೂಹ್‌ಗಳು

ವುಝೂವಿನಲ್ಲಿ ಈ ಕೆಳಗಿನ 9 ಅಂಶಗಳನ್ನು 'ಮಕ್ರೂಹ್' ಅಂದರೆ ಅನಪೇಕ್ಷಿತ ಅಥವಾ ಅಪ್ರಿಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಅವುಗಳಿಂದ ದೂರವಿರಬೇಕು.

1. ವುಝೂವಿನಲ್ಲಿ ಮುಸ್ತಹಬ್ ಆಗಿರುವ ಅಂಶಗಳನ್ನು ಕಡೆಗಣಿಸಿ ಬಿಡುವುದು ಅಥವಾ ಅವುಗಳಿಗೆ ವಿರುದ್ಧವಾಗಿ ವರ್ತಿಸುವುದು.
2. ಅಗತ್ಯಕ್ಕಿಂತ ಹೆಚ್ಚು ನೀರನ್ನು ಬಳಸುವುದು.
3. ಅಂಗಾಂಗಗಳನ್ನು ಸರಿಯಾಗಿ ತೊಳೆಯಲಾಗಿದೆಯೋ ಇಲ್ಲವೋ ಎಂದು ಸಂಶಯಕ್ಕೆಡೆಯಾಗುವಷ್ಟು ಕಡಿಮೆ ನೀರನ್ನು ಬಳಸುವುದು.
4. ವುಝೂ ಮಾಡುವಾಗ ಅನಗತ್ಯ ಮಾತುಗಳನ್ನಾಡುವುದು.
5. ಮುಖದ ಮೇಲೆ ನೀರನ್ನು ಜೋರಾಗಿ ಅಪ್ಪಳಿಸುವುದು. ಹಾಗೆಯೇ ಬೇರೆ ಅಂಗಾಂಗಗಳ ಮೇಲೆ ಜೋರಾಗಿ ನೀರನ್ನು ಹೊಡೆದು ಹನಿಗಳನ್ನು ಚಿಮ್ಮಿಸುವುದು.
6. ಅಂಗಾಂಗಗಳನ್ನು ಮೂರಕ್ಕಿಂತ ಹೆಚ್ಚು ಸಲ ತೊಳೆಯುವುದು.
7. ತಲೆ ಸವರಲು ಮೂರು ಬಾರಿ ಪ್ರತ್ಯೇಕವಾಗಿ ನೀರನ್ನು ಬಳಸುವುದು.
8. ವುಝೂ ಮಾಡಿದ ಬಳಿಕ ಕೈಗಳಲ್ಲಿರುವ ನೀರನ್ನು ಕೊಡವಿ ಬಿಡುವುದು.
9. ವುಝೂವಿನಲ್ಲಿ ತೊಳೆಯಬೇಕಾದ ಅಂಗಗಳ ಹೊರತು ಬೇರಾವುದೇ ಅಂಗವನ್ನು ಅನಗತ್ಯವಾಗಿ ತೊಳೆಯುವುದು.

ವುಝೂವನ್ನು ಭಂಗಗೊಳಿಸುವ ಅಂಶಗಳು

ವುಝೂವನ್ನು ಭಂಗಗೊಳಿಸುವ ಅಂಶಗಳನ್ನು ಎರಡು ವಿಧದಲ್ಲಿ ವಿಂಗಡಿಸಿ ವಿವರಿಸಬಹುದು.

ಪ್ರಥಮ ವಿಧ

1. ಮಲ, ಮೂತ್ರ ವಿಸರ್ಜನೆ.
2. ಅಧೋವಾಯು ವಿಸರ್ಜನೆ.
3. ಮುಂದಿನ ಅಥವಾ ಹಿಂದಿನ ಗುಪ್ತಾಂಗದಿಂದ ಹುಳ, ರಕ್ತ ಮತ್ತಿತರ ಯಾವುದೇ ವಸ್ತುವಿನ ವಿಸರ್ಜನೆ.
4. ಶರೀರದ ಯಾವುದೇ ಭಾಗದಿಂದ ರಕ್ತ ಸೋರುವುದು.
5. ಬಾಯಿ ತುಂಬಾ ವಾಂತಿ ಮಾಡುವುದು, ವಾಂತಿಯಲ್ಲಿ ರಕ್ತ ಅಥವಾ ಕೀವು ಸೇರಿರುವುದು.
6. ಸ್ವಲ್ಪ ಸ್ವಲ್ಪವಾಗಿ ಅನೇಕ ಬಾರಿ ವಾಂತಿಯಾಗಿದ್ದು, ವಾಂತಿಯ ಒಟ್ಟು ಪ್ರಮಾಣವು ಬಾಯ್ತುಂಬಾ ವಾಂತಿಯಾಗುವುದಕ್ಕೆ ಸಮಾನವಾಗಿರುವುದು.

7. ಉಗುಳುವಾಗ ರಕ್ತ ಹೊರಡುವುದು ಮತ್ತು ಉಗುಳಿನಲ್ಲಿ ರಕ್ತದ ವರ್ಣವೇ ಪ್ರಧಾನವಾಗಿರುವುದು.

8. ಯಾವೆಲ್ಲ ಕಾರ್ಯಗಳಿಂದ ಸ್ನಾನ ಕಡ್ಡಾಯವಾಗುತ್ತದೋ ಅವೆಲ್ಲವುಗಳಿಂದಲೂ ವುಝೂ ಭಂಗವಾಗುತ್ತದೆ.

ದ್ವಿತೀಯ ವಿಧ

1. ಅಂಗಾತ, ಕವಚಿ ಅಥವಾ ಒರಗಿ ನಿದ್ರೆ ಮಾಡುವುದು.
2. ಮಾನಸಿಕ ಸ್ತಿಮಿತ ಕಳೆದುಕೊಳ್ಳುವುದು.
3. ವ್ಯಾಧಿ ಅಥವಾ ಆಘಾತದಿಂದ ಪ್ರಜ್ಞೆ ಕಳೆದುಕೊಳ್ಳುವುದು.
4. ಯಾವುದಾದರೂ ಮಾದಕ ಪದಾರ್ಥದಿಂದಾಗಿ ಅಮಲೇರುವುದು.
5. ಮೊಣಕಾಲೂರಿ ಕುಳಿತ ಸ್ಥಿತಿಯಲ್ಲಿ ಅಥವಾ ಬೇರಾವುದಾದರೂ ವಿಧಾನದಿಂದ ಎರಡೂ ಪಾದಗಳ ಹಿಂದಿನ ಭಾಗವು ನೆಲದಿಂದ ಬೇರ್ಪಟ್ಟಿರುವ ಸ್ಥಿತಿಯಲ್ಲಿ ನಿದ್ರೆ ಮಾಡುವುದು.

ಈ ಪೈಕಿ ಯಾವುದೇ ಅಂಶವು ಸಂಭವಿಸಿದಲ್ಲಿ ವುಝೂ ಮುರಿಯುತ್ತದೆ.

❑

ಸ್ನಾನದ ನಿಯಮಗಳು

ಸ್ನಾನದ ಫರ್ಝ್(ಕಡ್ಡಾಯ ಅಂಶ)ಗಳು

ಸ್ನಾನವೆಂದರೆ ಸಂಪೂರ್ಣ ಶರೀರವನ್ನು ನೀರಿನಿಂದ ತೊಳೆದು ಶುಚಿಗೊಳಿಸುವ ಕ್ರಿಯೆ. ಇದರಲ್ಲಿ ಮೂರು ಅಂಶಗಳು ಕಡ್ಡಾಯವಾಗಿವೆ;

1. ಬಾಯಿ ಮುಕ್ಕಳಿಸುವುದು-ಕಂಠದ ವರೆಗೂ ನೀರು ತಲುಪಬೇಕು. ಉಪವಾಸವಿದ್ದಲ್ಲಿ, ನೀರು ಕಂಠದಿಂದ ಕೆಳಗಿಳಿಯದಂತೆ ಎಚ್ಚರ ವಹಿಸಬೇಕು.
2. ಮೂಗಿನೊಳಗೆ ನೀರು ಹರಿಸುವುದು.
3. ಕೂದಲೆಳೆಯಷ್ಟು ಸ್ಥಳವೂ ಒದ್ದೆಯಾಗದೆ ಉಳಿಯದಂತೆ ಸಂಪೂರ್ಣ ಶರೀರದ ಮೇಲೆ ಚೆನ್ನಾಗಿ ನೀರು ಹರಿಸುವುದು.

ಈ ಪೈಕಿ ಯಾವುದಾದರೂ ಒಂದಂಶ ಬಿಟ್ಟು ಹೋದಲ್ಲಿ ಸ್ನಾನ ಸಿಂಧುವಾಗುವುದಿಲ್ಲ.

ಸ್ನಾನದ ಸುನ್ನತ್‌ಗಳು

1. ಅಲ್ಲಾಹನನ್ನು ಮೆಚ್ಚಿಸುವ ಮತ್ತು ಪುಣ್ಯ ಪ್ರಾಪ್ತಿಯ ಸಂಕಲ್ಪದಿಂದ ಶುಚಿತ್ವವನ್ನು ಪಾಲಿಸುವುದು.

2. ಸುನ್ನತ್‌ನ ವಿಧಾನವನ್ನು ಕ್ರಮಬದ್ಧವಾಗಿ ಪಾಲಿಸುತ್ತಾ ಸ್ನಾನ ಮಾಡುವುದು.
3. ಎರಡೂ ಕೈಗಳನ್ನು ಮಣಿಗಂಟುಗಳ ಸಹಿತ ತೊಳೆದುಕೊಳ್ಳುವುದು.
4. ಶರೀರದಿಂದ ಮಾಲಿನ್ಯವನ್ನು ನೀಗಿಸುವುದು ಮತ್ತು ಶರೀರವನ್ನು ತಿಕ್ಕಿ ತೊಳೆಯುವುದು.
5. ಹಲ್ಲುಜ್ಜುವುದು.
6. ಸಂಪೂರ್ಣ ಶರೀರದ ಮೇಲೆ ಮೂರು ಸಲ ನೀರು ಹರಿಸುವುದು.

ಸ್ನಾನದಲ್ಲಿ ಮುಸ್ತಹಬ್ ಅಂಶಗಳು

1. ಮರೆಯಲ್ಲಿ (ಜನರಿಗೆ ಕಾಣಿಸದಂತೆ) ಸ್ನಾನ ಮಾಡುವುದು.
2. ಮೊದಲು ಶರೀರದ ಬಲಭಾಗವನ್ನು, ಆ ಬಳಿಕ ಎಡಭಾಗವನ್ನು ತೊಳೆಯುವುದು.
3. ಶುದ್ಧವಾಗಿರುವ ಸ್ಥಳದಲ್ಲಿ ಸ್ನಾನ ಮಾಡುವುದು.
4. ಸ್ನಾನ ಮಾಡುವಾಗ (ಸತ್ರ್ ಮುಚ್ಚುವಂತಹ) ವಸ್ತ್ರ ಧರಿಸಿ ಸ್ನಾನ ಮಾಡುವುದು.
5. ನೀರನ್ನು ಮಿತವಾಗಿ ಖರ್ಚು ಮಾಡುವುದು. (ಜಿಪುಣತೆಯೂ ಸಲ್ಲದು. ಅಪವ್ಯಯವೂ ಸಲ್ಲದು.)

ಸ್ನಾನ ಯಾವಾಗ ಕಡ್ಡಾಯವಾಗುತ್ತದೆ?

ಈ ಕೆಳಗಿನ ನಾಲ್ಕು ಸ್ಥಿತಿಗಳಲ್ಲಿ ಸ್ನಾನವು ಕಡ್ಡಾಯವಾಗುತ್ತದೆ:

1. ವೀರ್ಯ ಸ್ಖಲನ- ಅದು ಪ್ರಜ್ಞಾಪೂರ್ವಕ ಆಗಿರಲಿ, ಅರಿವಿಲ್ಲದೆ ಅಥವಾ ತನ್ನಿಂತಾನೇ ಆಗಿರಲಿ.
2. ಸ್ತ್ರೀ-ಪುರುಷರ ಲೈಂಗಿಕ ಸಂಪರ್ಕ.
3. ಋತುಸ್ರಾವ.
4. ಬಾಣಂತಿತನದ ಗರ್ಭಸ್ರಾವ- ಇದರ ಕನಿಷ್ಠ ಅವಧಿ ಇಲ್ಲ, ಗರಿಷ್ಠ ಅವಧಿ 40 ದಿನವಾಗಿದೆ.

❑

ತಯಮ್ಮುಮ್‌ನ ನಿಯಮಗಳು

ಶುದ್ಧಿಗಾಗಿ ನೀರು ಲಭ್ಯವಿಲ್ಲದ, ಯಾವುದೇ ಕಾರಣದಿಂದ ನೀರಿನ ಬಳಕೆ ಅಸಾಧ್ಯವಾದ ಅಥವಾ ಅದರಿಂದ ತೀವ್ರ ನಷ್ಟದ ಆಶಂಕೆ ಇರುವಂತಹ ಸಂದರ್ಭದಲ್ಲಿ ವುಝೂ ಮತ್ತು ಸ್ನಾನದ ಬದಲು ತಯಮ್ಮುಮ್ ಮಾಡಬಹುದು.

ತಯಮ್ಮುಮ್‌ನ ಶಬ್ದಾರ್ಥ ಸಂಕಲ್ಪ ಮಾಡುವುದು ಎಂದಾಗಿದೆ. ಆದರೆ ಇಸ್ಲಾಮಿ ಕರ್ಮಶಾಸ್ತ್ರದಲ್ಲಿ ಇದರ ಅರ್ಥ ಮಣ್ಣಿನ ಮೂಲಕ ಶುಚಿತ್ವ ಪ್ರಾಪ್ತಿ ಮಾಡಲು ತೀರ್ಮಾನಿಸುವುದು ಎಂದಾಗಿದೆ.

ತಯಮ್ಮುಮ್ ಯಾವಾಗ ಮಾಡಬಹುದು?

ಈ ಕೆಳಗಿನ ಸನ್ನಿವೇಶಗಳಲ್ಲಿ ತಯಮ್ಮುಮ್ ಮಾಡಬಹುದು.

1. ನೀರು ವ್ಯಕ್ತಿಯ ವಾಸಸ್ಥಾನದಿಂದ ಕನಿಷ್ಠ ಒಂದು ಮೈಲಿ ದೂರದಲ್ಲಿದ್ದು ಅದನ್ನು ತರುವುದು ತೀರಾ ಪ್ರಯಾಸಕರವಾಗಿರುವುದು.

2. ನಿವಾಸದ ಬಳಿಯೇ ನೀರು ಲಭ್ಯವಿದ್ದರೂ ನೀರನ್ನು ಪಡೆಯುವ ಸಾಧನ ಲಭ್ಯವಿಲ್ಲದೆ ಇರುವುದು. ಉದಾ: ಬಾವಿಯ ಆಳದಲ್ಲಿ ನೀರಿದೆ. ಆದರೆ ಅದನ್ನು ಹೊರತೆಗೆಯಲು ಹಗ್ಗವಾಗಲಿ ಕೊಡವಾಗಲಿ ಇಲ್ಲದಿರುವುದು. ನೀರಿನ ಹತ್ತಿರ ಹೋದರೆ ಜೀವ, ಸೊತ್ತು ಮತ್ತು ಮಾನಕ್ಕೆ ಅಪಾಯವಿರುವುದು. ನೀರಿನ ಸಮೀಪ ಕ್ರೂರ ಪ್ರಾಣಿ ಅಥವಾ ಡಕಾಯಿತರ ಭೀತಿ ಇರುವುದು ಇತ್ಯಾದಿ.

3. ಪ್ರಯಾಣದಲ್ಲಿ ನೀರು ತೀರಾ ಅಲ್ಪಪ್ರಮಾಣದಲ್ಲಿ ಲಭ್ಯವಿದ್ದು ಅದನ್ನು ವುಝೂ ಅಥವಾ ಸ್ನಾನಕ್ಕೆ ಬಳಸಿದರೆ ಕುಡಿಯಲು ನೀರು ಉಳಿಯಲಾರದು ಎಂಬ ಆಶಂಕೆ ಉಂಟಾಗುವುದು.

4. ಅನಾರೋಗ್ಯ ಅಥವಾ ತೀವ್ರ ಚಳಿಯಿಂದಾಗಿ, ತಣ್ಣೀರು ಬಳಸಿದರೆ ಯಾವುದಾದರೂ ಗಂಭೀರ ರೋಗವುಂಟಾಗುವ ಆಶಂಕೆಯಿರುವುದು ಮತ್ತು ಬಿಸಿನೀರಿನ ಸೌಲಭ್ಯ ಇಲ್ಲದಿರುವುದು.

5. ನೀರು ಲಭ್ಯವಿದ್ದರೂ ಕೆಲವು ಸನ್ನಿವೇಶಗಳಲ್ಲಿ (ವಿಶೇಷವಾಗಿ ಬಸ್ಸು, ರೈಲು ಅಥವಾ ವಿಮಾನದಲ್ಲಿ ಪ್ರಯಾಣಿಸುವಾಗ ಜನಸಂದಣಿಯಿಂದಾಗಿ ನೀರಿನ ಹತ್ತಿರ ಹೋಗಲು ಸಾಧ್ಯವಾಗದೆ ಇರುವುದು, ನೀರಿನ ಬಳಿ ಹೋದರೆ ವಾಹನ ಹೊರಟು ಹೋಗುವ ಆಶಂಕೆ ಇರುವುದು ಅಥವಾ ಜನಸಂದಣಿಯಿಂದಾಗಿ ವಾಹನದಿಂದ ಇಳಿಯಲಿಕ್ಕೇ ಸಾಧ್ಯವಾಗದಿರುವುದು.)

6. ವುಝೂ ಅಥವಾ ಸ್ನಾನ ಮಾಡಲು ಹೊರಟರೆ, ಕಝಾ ಇಲ್ಲದಂತಹ ಯಾವುದಾದರೂ ನಮಾಝ್ ತಪ್ಪಿ ಹೋಗುವ ಸಾಧ್ಯತೆ ಇರುವುದು. ಉದಾ: ಜನಾಝಾ ನಮಾಝ್, ಈದ್ ನಮಾಝ್ ಇತ್ಯಾದಿ.

ತಯಮ್ಮುಮ್‌ನಲ್ಲಿ ಕಡ್ಡಾಯ ಅಂಶಗಳು

1. ಅಲ್ಲಾಹನನ್ನು ಮೆಚ್ಚಿಸಲಿಕ್ಕಾಗಿ ಶುಚಿತ್ವ ಪ್ರಾಪ್ತಿ ಮಾಡಬೇಕೆಂಬ ಸಂಕಲ್ಪ.
2. ಎರಡೂ ಹಸ್ತಗಳನ್ನು ಮಣ್ಣಿನ ಮೇಲೆ ಹೊಡೆದು, ಅವುಗಳನ್ನು ಸಂಪೂರ್ಣ ಮುಖದ ಮೇಲೆ ಸವರುವುದು.
3. ಮತ್ತೊಮ್ಮೆ ಎರಡೂ ಹಸ್ತಗಳನ್ನು ಮಣ್ಣಿನ ಮೇಲೆ ಹೊಡೆದು ಮೊಣ ಗಂಟುಗಳ ಸಹಿತ ಎರಡೂ ಕೈಗಳ ಮೇಲೆ ಹಸ್ತವನ್ನು ಸವರುವುದು.

ಹೀಗೆ ತಯಮ್ಮುಮ್‌ನಲ್ಲಿ ಪ್ರಸ್ತುತ ಮೂರು ಅಂಶಗಳು ಕಡ್ಡಾಯವಾಗಿವೆ. ಈ ಪೈಕಿ ಯಾವುದಾದರೂ ಒಂದಂಶವನ್ನು ಬಿಟ್ಟರೂ ತಯಮ್ಮುಮ್ ಅಸಿಂಧುವಾಗುತ್ತದೆ.

✦ ಯಾವೆಲ್ಲ ಅಂಶಗಳಿಂದ ವುಝೂ ಭಂಗವಾಗುತ್ತದೋ ಅವೆಲ್ಲವುಗಳಿಂದ ತಯಮ್ಮುಮ್ ಕೂಡಾ ಮುರಿಯುತ್ತದೆ.

✦ ಯಾವ ಕಾರಣದಿಂದ ವುಝೂ ಅಥವಾ ಸ್ನಾನ ಮಾಡುವ ಬದಲು ತಯಮ್ಮುಮ್ ಮಾಡಲಾಗಿತ್ತೋ ಆ ಕಾರಣವು ಮುಗಿದ ತಕ್ಷಣ ತಯಮ್ಮುಮ್ ಮುರಿಯುತ್ತದೆ. ಉದಾ: ನೀರು ಸಿಗದ ಕಾರಣ ತಯಮ್ಮುಮ್ ಮಾಡಿದ್ದರೆ ನೀರು ಲಭ್ಯವಾದೊಡನೆ ತಯಮ್ಮುಮ್ ಕೊನೆಗೊಳ್ಳುತ್ತದೆ.

✦ ತಯಮ್ಮುಮ್ ಅನ್ನು ವುಝೂವಿನ ಬದಲಿಗೆ ಮಾಡುವುದಾದರೂ ಸ್ನಾನದ ಬದಲಿಗೆ ಮಾಡುವುದಾದರೂ - ಅವೆರಡರ ವಿಧಾನ ಒಂದೇ.

❑

ನಮಾಝ್‌ನ ನಿಯಮಗಳು

ಮುಸ್ಲಿಮರ ಮೇಲೆ ದಿನ ನಿತ್ಯ 5 ಹೊತ್ತಿನ ನಮಾಝ್‌ಗಳು ಕಡ್ಡಾಯವಾಗಿದ್ದು ಅವುಗಳ ವಿವರ ಹೀಗಿವೆ:

1. ಫಜ್ರ್: ಇದರ ಸಮಯವು ಸುಬಹ್ ಸಾದಿಕ್ ಅಥವಾ ಮುಂಜಾವಿನಲ್ಲಿ ಬೆಳಕು ಹರಿಯಲು ಆರಂಭವಾಗುವಲ್ಲಿಂದ ಸೂರ್ಯೋದಯದ ವರೆಗೆ ಇರುತ್ತದೆ.

2. ಝುಹರ್: ಸೂರ್ಯನು ನಡು ನೆತ್ತಿಗೇರಿ ಇಳಿಮುಖವಾಗಲಾರಂಭಿಸಿದ ಬಳಿಕ (ನಡು ಮಧ್ಯಾಹ್ನದ ಬಳಿಕ) ಪ್ರತಿಯೊಂದು ವಸ್ತುವಿನ ನೆರಳು ಆ ವಸ್ತುವಿನ ಎರಡು ಪಟ್ಟಿನಷ್ಟು ಬೆಳೆಯುವ ತನಕ ಝುಹರ್ ನಮಾಝ್‌ಗೆ ಸಮಯವಿದೆ. ಆದರೆ ವಸ್ತುವಿನ ನೆರಳಿನ ಗಾತ್ರವು ಆ ವಸ್ತುವಿನ ಗಾತ್ರದಷ್ಟೇ ಬೆಳೆಯುವ ಸಮಯದೊಳಗೆ ನಮಾಝ್ ನಿರ್ವಹಿಸುವುದು ಉತ್ತಮ.

3. ಅಸರ್: ವಸ್ತುವಿನ ನೆರಳಿನ ಗಾತ್ರವು ಅದರ ದುಪ್ಪಟ್ಟಿನಷ್ಟು ಬೆಳೆಯುವ ಸಮಯದಿಂದ ಸೂರ್ಯಾಸ್ತಮಾನದ ವರೆಗೆ ಅಸರ್ ನಮಾಝ್ ನಿರ್ವಹಿಸಬಹುದು. ಆದರೆ ಸೂರ್ಯನು ಕೆಂಪೇರುವುದಕ್ಕೆ ಮುಂಚಿತವಾಗಿಯೇ ಅಸರ್ ನಮಾಝ್ ನಿರ್ವಹಿಸುವುದು ಶ್ರೇಷ್ಠ.

4. ಮಗ್ರಿಬ್: ಇದರ ಸಮಯವು ಸೂರ್ಯಾಸ್ತಮಾನದ ಬಳಿಕ ಆರಂಭವಾಗಿ ದಿಗಂತದಲ್ಲಿನ ಕೆಂಪು ವರ್ಣ ಮಾಯವಾಗುವ ತನಕ ಇರುತ್ತದೆ. ಆದರೆ ಮಗ್ರಿಬ್ ನಮಾಝನ್ನು ಅದರ ಆರಂಭದ ಸಮಯದಲ್ಲೇ ನಿರ್ವಹಿಸುವುದು ಶ್ರೇಷ್ಠ.

5. ಇಶಾ: ಇದರ ಸಮಯವು ದಿಗಂತದಲ್ಲಿನ ಬಿಳುಪು ಮಾಯವಾದ ಬಳಿಕ ಆರಂಭವಾಗಿ ಮುಂಜಾವಿನ ವರೆಗೆ ಇರುತ್ತದೆ. ಸೂರ್ಯಾಸ್ತಮಾನದ ಬಳಿಕ ಸುಮಾರು

75 ನಿಮಿಷ ಕಳೆದಾಗ ದಿಗಂತದ ಬಿಳುಪು ಮಾಯವಾಗುತ್ತದೆ. ಆದರೆ ಎಚ್ಚರಿಕೆಯ ದೃಷ್ಟಿಯಿಂದ ಸೂರ್ಯಾಸ್ತಮಾನದ ಬಳಿಕ 90 ನಿಮಿಷಗಳು ಕಳೆದ ಬಳಿಕವಷ್ಟೇ ಇಶಾ ನಮಾಝ್ ಆರಂಭಿಸುವುದು ಉತ್ತಮ.

ಸೂಚನೆ: ಸೂರ್ಯನು ಉದಯಿಸುತ್ತಿರುವಾಗ, ಮಧ್ಯಾಹ್ನ ಸೂರ್ಯನು ನಡು ನೆತ್ತಿಯ ಮೇಲಿರುವಾಗ ಮತ್ತು ಸೂರ್ಯನು ಅಸ್ತಮಿಸುತ್ತಿರುವಾಗ ಈ ಮೂರು ಸಂದರ್ಭಗಳಲ್ಲಿ ನಮಾಝ್ ನಿರ್ವಹಿಸಬಾರದು.

ಅದಾನ್

ಸಾಮೂಹಿಕವಾಗಿ ನಿರ್ವಹಿಸಲಾಗುವ ಕಡ್ಡಾಯ ನಮಾಝ್‌ಗಳಲ್ಲಿ ಭಾಗವಹಿಸ ಬೇಕೆಂದು ನಿರ್ದಿಷ್ಟ ಪದಗಳನ್ನು ಬಳಸಿ ಜನರಿಗೆ ಕರೆ ನೀಡುವ ಕ್ರಿಯೆಗೆ "ಅದಾನ್" ಎನ್ನುತ್ತಾರೆ. ಕಡ್ಡಾಯವಾದ ನಮಾಝ್‌ಗಳಿಗೆ ಅದಾನ್ ಹೇಳುವುದು ಸುನ್ನತೆ ಮುಅಕ್ಕದಃ ಅರ್ಥಾತ್ ಮಹತ್ವದ ಸುನ್ನತ್ ಆಗಿದೆ. ನಮಾಝ್‌ನ ನಿರ್ದಿಷ್ಟ ಸಮಯ ಗತಿಸಿ ಹೋದರೂ ಈ ನಿಯಮ ಅನ್ವಯಿಸುತ್ತದೆ.

ಅದಾನ್‌ನ ವಿಧಾನ ಹೀಗಿದೆ:

ಅದಾನ್ ಹೇಳುವವನು ಒಂದು ಎತ್ತರವಾದ ಸ್ಥಳದಲ್ಲಿ ಕಿಬ್ಲಾದ ದಿಕ್ಕಿಗೆ ಮುಖ ಮಾಡಿ ನಿಲ್ಲಬೇಕು. ಆ ಬಳಿಕ ತನ್ನ ತೋರುಬೆರಳುಗಳನ್ನು ಕಿವಿಗಳಲ್ಲಿಟ್ಟು ಜೋರಾಗಿ ಹೀಗೆ ಹೇಳಬೇಕು:

"ಅಲ್ಲಾಹು ಅಕ್ಬರ್." (ಅಲ್ಲಾಹನು ಸರ್ವೋನ್ನತನು) -4ಸಲ

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್." (ಅಲ್ಲಾಹನ ಹೊರತು ಬೇರೆ ಯಾರೂ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ) -2 ಸಲ

"ಅಶ್‌ಹದು ಅನ್ನ ಮುಹಮ್ಮದರ್‌ರಸೂಲುಲ್ಲಾಹ್." (ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯವಹಿಸುತ್ತೇನೆ) -2 ಸಲ

"ಹಯ್ಯ ಅಲಸ್ಸಲಾಃ." (ಬನ್ನಿ ನಮಾಝಿಗೆ) -2ಸಲ

"ಹಯ್ಯ ಅಲಲ್ ಫಲಾಹ್." (ಬನ್ನಿ ವಿಜಯದೆಡೆಗೆ) -2ಸಲ

"ಅಲ್ಲಾಹು ಅಕ್ಬರ್." (ಅಲ್ಲಾಹನು ಸರ್ವೋನ್ನತನು) -2ಸಲ

"ಲಾ ಇಲಾಹ ಇಲ್ಲಲ್ಲಾಹ್." (ಅಲ್ಲಾಹನ ಹೊರತು ಬೇರೆ ಆರಾಧ್ಯರಿಲ್ಲ) -1ಸಲ.

ಫಜ್ರ್ ನಮಾಝಿಗೆ ಅದಾನ್ ಹೇಳುವಾಗ "ಹಯ್ಯ ಅಲಲ್ ಫಲಾಹ್" ಎಂದು ಎರಡು ಬಾರಿ ಹೇಳಿದ ಬಳಿಕ "ಅಸ್ಸಲಾತು ಖೈರುಮ್ಮಿನನ್ನೌಮ್"(ನಮಾಝ್ ನಿದ್ದೆಗಿಂತ ಶ್ರೇಷ್ಠ) ಎಂದು ಎರಡು ಸಲ ಹೇಳಬೇಕು. ಅದಾನ್ ಕೇಳುವವರು ಅದಾನ್‌ನ ಪ್ರತಿಯೊಂದು ನುಡಿಗೆ ಉತ್ತರ ಹೇಳಬೇಕಾದುದು ಮುಸ್ತಹಬ್ ಆಗಿದೆ. ಅಂದರೆ ಅವರು ಅದಾನ್‌ನ ಪ್ರತಿಯೊಂದು ನುಡಿಯನ್ನು ಕೇಳಿದ ಬಳಿಕ ಅದನ್ನು ಹಾಗೆಯೇ ಪುನರಾವರ್ತಿಸಬೇಕು. ಆದರೆ, "ಹಯ್ಯ ಅಲಸ್ಸಲಾಃ" ಮತ್ತು "ಹಯ್ಯ

ಅಲಲ್ ಫಲಾಹ್" ಎಂಬ ನುಡಿಗಳಿಗೆ ಉತ್ತರವಾಗಿ "ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್" (ಅಲ್ಲಾಹನಿಂದಲ್ಲದೆ ಯಾವುದೇ ಅಧಿಕಾರವಾಗಲಿ ಶಕ್ತಿಯಾಗಲಿ ಇಲ್ಲ) ಎಂದು ಹೇಳಬೇಕು.

"ಅಶ್‌ಹದು ಅನ್ನ ಮುಹಮ್ಮದರ್‌ರಸೂಲುಲ್ಲಾಹ್" ಎಂಬ ನುಡಿಗೆ ಉತ್ತರಿಸಿದ ಬಳಿಕ ಪ್ರತ್ಯೇಕವಾಗಿ "ಸಲ್ಲಲ್ಲಾಹು ಅಲೈಹಿ ವಸಲ್ಲಮ್" (ಅವರ ಮೇಲೆ ಅಲ್ಲಾಹನ ವಿಶೇಷ ಅನುಗ್ರಹವಿರಲಿ) ಎಂದು ಹೇಳುವುದು ಮುಸ್ತಹಬ್ ಆಗಿದೆ. ಹಾಗೆಯೇ ಫಜ್ರ್ ನಮಾಝ್‌ನಲ್ಲಿ "ಅಸ್ಸಲಾತು ಖೈರುಮ್ಮಿನನ್ನೌಮ್" ಎಂಬ ನುಡಿಯನ್ನು ಕೇಳಿದಾಗ "ಸದಕ್ತ ವಬರಿರ್ತ" (ನೀನು ಸತ್ಯವಾದುದನ್ನೇ ಮತ್ತು ಸರಿಯಾದುದನ್ನೇ ಹೇಳಿದೆ) ಎಂದು ಉತ್ತರಿಸಬೇಕು.

ಅದಾನ್ ಹೇಳುವವರು, ಜನರು ಈ ರೀತಿ ಅದಾನ್‌ಗೆ ಉತ್ತರ ಹೇಳಲು ಅನುಕೂಲವಾಗುವಂತೆ ಅದಾನ್‌ನ ಪ್ರತಿಯೊಂದು ನುಡಿಯನ್ನು ಉಚ್ಚರಿಸಿದ ಬಳಿಕ ತುಸು ವಿರಾಮ ಕೊಡಬೇಕು.

ಅದಾನ್ ಮುಗಿದ ಬಳಿಕ ಈ ರೀತಿ ದುಆ ಮಾಡಬೇಕು:

اَللّٰهُمَّ رَبَّ هٰذِهِ الدَّعْوَةِ التَّآمَّةِ، وَالصَّلٰوةِ الْقَآئِمَةِ اٰتِ مُحَمَّدَنِ الْوَسِيْلَةَ وَالْفَضِيْلَةَ، وَابْعَثْهُ مَقَامًا مَّحْمُوْدَانِ الَّذِىْ وَعَدْتَّهُ

"ಅಲ್ಲಾಹುಮ್ಮ ರಬ್ಬ ಹಾದಿಹಿದ್ದ‌ಅ್‌ವತಿತ್ತಾಮ್ಮತಿ, ವಸ್ಸಲಾತಿಲ್ ಕಾಇಮತಿ, ಆತಿ ಮುಹಮ್ಮದನಿಲ್ ವಸೀಲತ ವಲ್ ಫದೀಲತ ವಬ್‌ಅಸ್‌ಹು ಮಕಾಮಮ್ಮಹ್ ಮೂದನಿಲ್ಲದೀ ವಅತ್ತಹೂ."

(ಪರಿಪೂರ್ಣವಾದ(ಏಕದೇವತ್ವದ) ಈ ಕರೆಯ ಹಾಗೂ ಸ್ಥಾಪಿಸಲಾದ ನಮಾಝಿನ ಒಡೆಯನಾದ ಅಲ್ಲಾಹನೇ! ಮುಹಮ್ಮದ್‌ರಿಗೆ(ಸ) ವಸೀಲ(ನಿನ್ನ ಸಾಮೀಪ್ಯದ ವಿಶಿಷ್ಟ ಸ್ಥಾನ)ವನ್ನು ಮತ್ತು ಶ್ರೇಷ್ಠತೆಯನ್ನು ದಯಪಾಲಿಸು. ನೀನು ವಾಗ್ದಾನ ಮಾಡಿರುವ ಮಹ್ಮೂದ್(ಪ್ರಶಂಸಿತ) ಸ್ಥಾನದಲ್ಲಿ ಅವರನ್ನು ವಿರಾಜಮಾನಗೊಳಿಸು.)

ಇಕಾಮತ್

ಅದಾನ್‌ನ ಬಳಿಕ ಕಡ್ಡಾಯ ನಮಾಝ್ ಆರಂಭವಾಗುವ ವೇಳೆ ಅದಾನ್ ಗಿಂತ ಸಣ್ಣ ಧ್ವನಿಯಲ್ಲಿ ಅದಾನ್‌ನ ನುಡಿಗಳನ್ನೇ ಪುನರಾವರ್ತಿಸಲಾಗುತ್ತದೆ. ಇದು, ನಮಾಝ್ ಆರಂಭವಾಗುತ್ತಿದೆ ಎಂಬುದರ ಘೋಷಣೆಯಾಗಿದೆ. ಇದಕ್ಕೆ "ಇಕಾಮತ್" ಎನ್ನುತ್ತಾರೆ. ಇಕಾಮತ್‌ನಲ್ಲಿ "ಹಯ್ಯ ಅಲಲ್ ಫಲಾಹ್" ಎಂದು ಹೇಳಿದ ಬಳಿಕ "ಕದ್ ಕಾಮತಿಸ್ಸಲಾಃ" ಎಂದು ಎರಡು ಸಲ ಹೇಳಲಾಗುತ್ತದೆ. ಇದರ ಅರ್ಥ "ನಿಸ್ಸಂದೇಹವಾಗಿ ನಮಾಝ್ ಸ್ಥಾಪಿತವಾಯಿತು(ಆರಂಭವಾಯಿತು)" ಎಂದಾಗಿದೆ.

ಇಕಾಮತ್‌ನ ನುಡಿಗಳಿಗೆ ಉತ್ತರ ಹೇಳುವುದು ವಾಜಿಬ್ ಅಲ್ಲ, ಮುಸ್ತಹಬ್ ಆಗಿದೆ. "ಕದ್‌ಕಾಮತಿಸ್ಸಲಾಃ" ಎಂಬ ನುಡಿಗೆ ಉತ್ತರವಾಗಿ "ಅಕಾಮಹಲ್ಲಾಹು ವಅದಾಮಹಾ" (ಅಲ್ಲಾಹನು ಇದನ್ನು ಸದಾ ಸ್ಥಾಪಿತವಾಗಿಡಲಿ ಹಾಗೂ ಶಾಶ್ವತಗೊಳಿಸಲಿ) ಎಂದು ಹೇಳಬೇಕು.

ಅದಾನ್ ಮತ್ತು ಇಕಾಮತ್‌ನ ಉತ್ತರಗಳನ್ನು ಮೆಲುದನಿಯಲ್ಲಿ ಹೇಳಬೇಕು.

ನಮಾಝ್‌ನ ಶರತ್ತುಗಳು

ನಮಾಝ್ ನಿರ್ವಹಣೆ ಸರಿಯಾಗಬೇಕಿದ್ದರೆ, ಅದಕ್ಕೆ ಮುಂಚೆ ಏಳು ಅಗತ್ಯಗಳನ್ನು ಪೂರ್ತಿಗೊಳಿಸಬೇಕು. ಇವುಗಳನ್ನು ನಮಾಝ್‌ನ ಶರತ್ತುಗಳೆಂದು ಕರೆಯಲಾಗುತ್ತದೆ. ಈ ಪೈಕಿ ಯಾವುದಾದರೂ ಒಂದು ಬಿಟ್ಟು ಹೋದರೂ ನಮಾಝ್ ಆಗುವುದಿಲ್ಲ. ಆ ಶರತ್ತುಗಳು ಹೀಗಿವೆ:

1. ಶರೀರ ಶುದ್ಧಿ: ಅಂದರೆ ಶರೀರವು ಎಲ್ಲ ಬಗೆಯ ಮಾಲಿನ್ಯಗಳಿಂದ ಮುಕ್ತವಾಗಿರಬೇಕು. (ಸ್ನಾನ ಕಡ್ಡಾಯವಾಗಿದ್ದರೆ ಸ್ನಾನ ಮಾಡಿರಬೇಕು. ವುಝೂ ಭಂಗವಾಗಿದ್ದರೆ ವುಝೂ ಮಾಡಿರಬೇಕು.)

2. ವಸ್ತ್ರ ಶುದ್ಧಿ: ನಮಾಝ್ ಮಾಡುವವನು ಧರಿಸಿರುವ ಎಲ್ಲ ವಸ್ತ್ರ ಮತ್ತು ಉಡುಗೆಗಳು ಶುದ್ಧವಾಗಿರಬೇಕು.

3. ಸ್ಥಳದ ಶುದ್ಧಿ: ಅಂದರೆ ನಮಾಝ್ ಮಾಡಲು ಬಳಸುವ ನೆಲ ಹಾಗೂ ವಸ್ತ್ರ ಹಾಸಿದ್ದರೆ ಆ ವಸ್ತ್ರ ಶುದ್ಧವಾಗಿರಬೇಕು.

4. ಸತ್ರ್ ಮರೆಸುವುದು: ಶರೀರದ ಯಾವೆಲ್ಲಾ ಭಾಗಗಳನ್ನು ಮುಚ್ಚಿಕೊಳ್ಳುವುದು ಕಡ್ಡಾಯವೋ ಆ ಎಲ್ಲ ಭಾಗಗಳನ್ನು ಸರಿಯಾಗಿ ಮುಚ್ಚಿಕೊಂಡಿರಬೇಕು. ಪುರುಷನು ನಾಭಿಯಿಂದ ಮೊಣಕಾಲ ವರೆಗಿನ ಭಾಗವನ್ನು ಮರೆಸಿರಬೇಕು. ಸ್ತ್ರೀಯು ತನ್ನ ಹಸ್ತ, ಪಾದ ಮತ್ತು ಮುಖಗಳ ಹೊರತು ಉಳಿದೆಲ್ಲ ಭಾಗಗಳನ್ನು ಮರೆಸಿರಬೇಕು. ಶರೀರದ ಇಷ್ಟು ಭಾಗಗಳನ್ನು ನಮಾಝ್‌ನಲ್ಲಿ ಮಾತ್ರವಲ್ಲದೆ ಬೇರೆ ಸಮಯಗಳಲ್ಲೂ ಮುಚ್ಚಿಕೊಂಡಿರಬೇಕಾದುದು ಕಡ್ಡಾಯವಾಗಿದೆ.

5. ನಮಾಝ್‌ನ ಸಮಯವಾಗಿರಬೇಕು: ಪ್ರತಿಯೊಂದು ನಮಾಝ್‌ಗೆ ನಿಶ್ಚಿತ ಸಮಯಗಳಿದ್ದು, ಆಯಾ ಸಮಯದಲ್ಲೇ ಆ ನಮಾಝನ್ನು ನಿರ್ವಹಿಸಬೇಕು. ನಿಶ್ಚಿತ ಸಮಯಕ್ಕಿಂತ ಮುಂಚೆ ಅಥವಾ ನಿಶ್ಚಿತ ಸಮಯ ಕಳೆದು ಹೋದ ಬಳಿಕ ನಮಾಝ್ ನಿರ್ವಹಿಸುವುದು ಸರಿಯಲ್ಲ.

6. ಕಿಬ್ಲಾ: ನಮಾಝ್ ಮಾಡುವಾಗ ಕಿಬ್ಲಾದ ಕಡೆಗೆ ಮುಖ ಮಾಡಿಕೊಂಡಿರಬೇಕು. ಮಕ್ಕಾದಲ್ಲಿರುವ ಪವಿತ್ರ ಕಅಬಾ ಭವನವು ಯಾವ ದಿಕ್ಕಿನಲ್ಲಿದೆಯೋ ಆ ದಿಕ್ಕನ್ನೇ ಕಿಬ್ಲಾ ಎನ್ನುತ್ತಾರೆ.

7. ನಿಯ್ಯತ್ ಅಥವಾ ಸಂಕಲ್ಪ: ಅಂದರೆ ನಮಾಝ್ ಮಾಡುವವನು ತಾನು ಯಾವ ನಮಾಝನ್ನು ನಿರ್ವಹಿಸುತ್ತಿದ್ದೇನೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಳ್ಳಬೇಕು.

ಬಾಯಲ್ಲಿ ಅದನ್ನು ಹೇಳಿದರೆ ಒಳ್ಳೆಯದು. ಆದರೆ ಹೇಳಬೇಕಾದುದು ಕಡ್ಡಾಯವಲ್ಲ. ಇಮಾಮ್‌ನ ಜೊತೆಗೆ ನಮಾಝ್ ಮಾಡುವಾಗ, ಇಮಾಮ್‌ನ ಜೊತೆ ನಮಾಝ್ ಮಾಡುತ್ತೇನೆ ಎಂದೂ ಸಂಕಲ್ಪ ಮಾಡಬೇಕು.

ನಮಾಝ್‌ನ ಅರ್ಕಾನ್(ಕಡ್ಡಾಯ ಕಾರ್ಯಗಳು)

ನಮಾಝ್ ಸಿಂಧುವಾಗಬೇಕಿದ್ದರೆ ಈ ಕೆಳಗಿನ 7 ಕಾರ್ಯಗಳನ್ನು ಕಡ್ಡಾಯವಾಗಿ ಮಾಡಬೇಕು. ಇವುಗಳನ್ನು "ನಮಾಝ್‌ನ ಅರ್ಕಾನ್" ಎಂದು ಕರೆಯುತ್ತಾರೆ. ಈ ಪೈಕಿ ಯಾವುದಾದರೂ ಒಂದಂಶವು ಬಿಟ್ಟು ಹೋದರೂ ನಮಾಝ್ ಅಸಿಂಧುವಾಗುತ್ತದೆ:

1. ತಕ್ಬೀರೆ ತಹ್ರೀಮಾ - ಅಂದರೆ ನಮಾಝನ್ನು ಪ್ರಾರಂಭಿಸುತ್ತಾ 'ಅಲ್ಲಾಹು ಅಕ್ಬರ್' ಎಂದು ಹೇಳುವುದು. ಹೀಗೆ ಹೇಳಿ ನಮಾಝ್ ಆರಂಭಿಸಿದ ಬಳಿಕ ನಮಾಝ್ ಮುಗಿಯುವ ತನಕ ತಿನ್ನುವುದು, ಕುಡಿಯುವುದು, ನಡೆಯುವುದು, ಮಾತನಾಡುವುದು ಎಲ್ಲವೂ ನಿಷಿದ್ಧ.

2. ಕಿಯಾಮ್- ಅರ್ಥಾತ್ ನಿಲ್ಲುವುದು. ನಮಾಝ್‌ನಲ್ಲಿ ಕುರ್‌ಆನಿನ ಒಂದು ದೊಡ್ಡ ವಾಕ್ಯ ಅಥವಾ ಮೂರು ಸಣ್ಣ ವಾಕ್ಯಗಳನ್ನು ಓದಲು ಬೇಕಾಗುವಷ್ಟು ಸಮಯ, ನೇರವಾಗಿ ನಿಂತುಕೊಳ್ಳುವುದು ಕಡ್ಡಾಯವಾಗಿದೆ. (ಇದು ಫರ್ಝ್ ಮತ್ತು ವಾಜಿಬ್ ನಮಾಝ್‌ಗಳಿಗೆ ಮಾತ್ರ ಅನ್ವಯವಾಗುತ್ತದೆ)

3. ಕಿರಾಅತ್- ಅರ್ಥಾತ್ ಕುರ್‌ಆನ್ ಪಠಣ. ನಮಾಝ್‌ನಲ್ಲಿ ಕುರ್‌ಆನಿನ ಕನಿಷ್ಠಪಕ್ಷ ಒಂದು ದೀರ್ಘವಾದ ವಾಕ್ಯವನ್ನು ಅಥವಾ ಮೂರು ಸಣ್ಣ ವಾಕ್ಯಗಳನ್ನು ಓದುವುದು. ಫರ್ಝ್ ನಮಾಝ್‌ಗಳ ಪ್ರಥಮ ಎರಡು ರಕಅತ್‌ಗಳಲ್ಲಿ ಮಾತ್ರ ಇದು ಕಡ್ಡಾಯ. ಆದರೆ ಸುನ್ನತ್ ಹಾಗೂ ನಫಿಲ್ ನಮಾಝ್‌ಗಳ ಎಲ್ಲ ರಕಅತ್ ಗಳಲ್ಲೂ ಇದು ಕಡ್ಡಾಯವಾಗಿದೆ.

4. ರುಕೂಅ್- ಅರ್ಥಾತ್ ಬಾಗುವುದು. ನಮಾಝ್‌ನ ಪ್ರತಿಯೊಂದು ರಕಅತ್‌ನಲ್ಲಿ ಒಂದು ಬಾರಿ ಬಾಗಲೇ ಬೇಕು. ರುಕೂಅ್ ಅಂದರೆ, ಹಸ್ತಗಳನ್ನು ಮೊಣಕಾಲುಗಳಲ್ಲಿಟ್ಟು ಬಾಗುವುದು.

5. ಸುಜೂದ್ - ಅರ್ಥಾತ್ ಸಾಷ್ಟಾಂಗ ವಂದನೆ. ನಮಾಝ್‌ನ ಪ್ರತಿಯೊಂದು ರಕಅತ್‌ನಲ್ಲಿ ಎರಡು ಸಾಷ್ಟಾಂಗ ವಂದನೆಗಳು ಕಡ್ಡಾಯ.

6. ಕಅ್‌ದಯೆ ಅಖೀರ - ಅರ್ಥಾತ್ ಕೊನೆಯಲ್ಲಿ ಕುಳಿತುಕೊಳ್ಳುವುದು. ಅಂದರೆ ನಮಾಝ್‌ನ ಕೊನೆಯ ರಕಅತ್‌ನಲ್ಲಿ, 'ತಶಹ್ಹುದ್' ಓದಲು ಬೇಕಾಗುವಷ್ಟು ಸಮಯ ಕುಳಿತುಕೊಳ್ಳುವುದು.

7. ಪ್ರಜ್ಞಾಪೂರ್ವಕವಾಗಿ ನಮಾಝನ್ನು ಅಂತ್ಯಗೊಳಿಸುವುದು - ಅಂದರೆ ನಮಾಝ್‌ನ ಕೊನೆಯಲ್ಲಿ ಪ್ರಜ್ಞಾಪೂರ್ವಕವಾಗಿ ನಮಾಝನ್ನು ಮುಗಿಸಿ ಬಿಡುವಂತಹ ಕೃತ್ಯವೊಂದನ್ನು ಮಾಡುವುದು.

ನಮಾಝ್‌ನ ವಾಜಿಬ್(ಅತ್ಯವಶ್ಯಕ) ಅಂಶಗಳು

ನಮಾಝ್‌ನಲ್ಲಿ ಅರ್ಕಾನ್‌ನ ಅನಂತರದ ಸ್ಥಾನವಿರುವುದು ವಾಜಿಬ್‌ಗಳಿಗೆ. ವಾಜಿಬ್ ಆಗಿರುವ ಯಾವುದಾದರೂ ಅಂಶವು ನಮಾಝ್‌ನಲ್ಲಿ ಮರೆವಿನಿಂದಾಗಿ ಬಿಟ್ಟು ಹೋದರೆ ಸಜ್ದಯೆ ಸಹೂ ಮಾಡಬೇಕು. (ಇದರ ವಿವರಗಳು ಮುಂದೆ ಬರಲಿವೆ) ಯಾರಾದರೂ ಉದ್ದೇಶಪೂರ್ವಕವಾಗಿ ವಾಜಿಬ್‌ಗಳನ್ನು ಬಿಟ್ಟರೆ ಮತ್ತು ಮರೆವಿನಿಂದ ಬಿಟ್ಟು, ಆ ಬಳಿಕ ಸಜ್ದಯೆ ಸಹೂ ಕೂಡಾ ಮಾಡದಿದ್ದರೆ ಆ ನಮಾಝ್ ಅಪೂರ್ಣ ವಾಗುತ್ತದೆ. ಆಗ ಸಂಪೂರ್ಣವಾಗಿ ನಮಾಝನ್ನು ಪುನರಾವರ್ತಿಸಿದರೆ ಉತ್ತಮ.

ನಮಾಝ್‌ನಲ್ಲಿ ಪಾಲಿಸಬೇಕಾದ ಇಂತಹ 14 ವಾಜಿಬ್‌ಗಳು ಹೀಗಿವೆ:

1. ಫರ್ಝ್ ನಮಾಝ್‌ನ ಮೊದಲ ಎರಡು ರಕಅತ್‌ಗಳಲ್ಲಿ ಕುರ್‌ಆನ್ ಪಠಣ.

2. ಸೂರಃ ಫಾತಿಹಾದ ಪಠಣ. ಫರ್ಝ್ ನಮಾಝ್‌ನ ಪ್ರಥಮ ಎರಡು ರಕಅತ್‌ಗಳಲ್ಲಿ ಇದು ವಾಜಿಬ್ ಆಗಿದೆ.

3. ಸೂರಃ ಫಾತಿಹಾ ಓದಿದ ಬಳಿಕ ಕುರ್‌ಆನಿನ ಬೇರೆ ಯಾವುದಾದರೂ ಸೂರಃ ಓದುವುದು. (ಫರ್ಝ್ ನಮಾಝ್‌ನ ಪ್ರಥಮ ಎರಡು ರಕಅತ್‌ಗಳಲ್ಲಿ ಮಾತ್ರ ಇದು ವಾಜಿಬ್ ಆಗಿದೆ)

4. ಕ್ರಮವಾಗಿ ಮೊದಲು ಸೂರಃ ಫಾತಿಹಾವನ್ನೂ ಆ ಬಳಿಕ ಬೇರೆ ಸೂರಃವನ್ನೂ ಓದುವುದು. ಬೇರೆ ಸೂರಃ ಫಾತಿಹಾಕ್ಕಿಂತ ಮುಂಚೆ ಓದಿದರೆ ವಾಜಿಬ್ ಸಂದಾಯವಾಗುವುದಿಲ್ಲ.

5. ಕಿರಾಅತ್, ರುಕೂಅ್, ಸುಜೂದ್‌ಗಳು ಮತ್ತು ಎಲ್ಲ ರಕಅತ್‌ಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವುದು. (ಮೊದಲು ನಿರ್ವಹಿಸಬೇಕಾದದ್ದನ್ನು ಮೊದಲು ಹಾಗೂ ಅನಂತರ ನಿರ್ವಹಿಸಬೇಕಾದದ್ದನ್ನು ಅನಂತರ ನಿರ್ವಹಿಸುವುದು)

6. 'ಕೌಮ' ಅಂದರೆ ರುಕೂಅ್‌ನ ಬಳಿಕ ನೇರವಾಗಿ ನಿಂತುಕೊಳ್ಳುವುದು.

7. 'ಜಲ್ಸಾ' ಅಂದರೆ ಎರಡು ಸುಜೂದ್‌ಗಳ ನಡುವೆ ಸಮಾಧಾನದಿಂದ ಕುಳಿತುಕೊಳ್ಳುವುದು.

8. 'ತಅ್‌ದೀಲ್' ಅಂದರೆ ರುಕೂಅ್, ಸುಜೂದ್ ಮುಂತಾದ ಎಲ್ಲ ಕ್ರಿಯೆಗಳನ್ನು ಸಮಾಧಾನದಿಂದ ನಿರ್ವಹಿಸುವುದು.

9. 'ಕಅ್‌ದಯೆ ಊಲಾ' ಅಂದರೆ ಮೂರು ಅಥವಾ ನಾಲ್ಕು ರಕಅತ್‌ನ ನಮಾಝ್‌ಗಳಲ್ಲಿ ಎರಡನೆಯ ರಕಅತ್‌ನ ಸುಜೂದ್‌ಗಳ ಅನಂತರ, ತಶಹ್ಹುದ್ ಓದಲು ಬೇಕಾಗುವಷ್ಟು ಸಮಯ ಕುಳಿತುಕೊಳ್ಳುವುದು.

10. ಎರಡೂ ಕಅ್‌ದ(ಕುಳಿತುಕೊಳ್ಳುವ ಸಂದರ್ಭ)ಗಳಲ್ಲಿ ಒಮ್ಮೆ "ಅತ್ತಹಿಯ್ಯಾತು..." ಓದುವುದು.

11. ಉಚ್ಚ ಸ್ವರದಲ್ಲಿ ನಿರ್ವಹಿಸಬೇಕಾದ ನಮಾಝ್‌ಗಳನ್ನು ಉಚ್ಚಸ್ವರದಲ್ಲೂ ಮೆಲುದನಿಯಲ್ಲಿ ನಿರ್ವಹಿಸಬೇಕಾದ ನಮಾಝ್‌ಗಳನ್ನು ಮೆಲುದನಿಯಲ್ಲೂ ಕುರ್‌ಆನ್

ಪಠಣ ಮಾಡುವುದು. ಫಜ್ರ್, ಮಗ್ರಿಬ್, ಇಶಾ, ಜುಮಾ, ಎರಡು ಈದ್‌ಗಳ ನಮಾಝ್, ತರಾವೀಹ್, ರಮಝಾನ್ ತಿಂಗಳ ವಿತ್ರ್ ನಮಾಝ್ ಇವು ಉಚ್ಚಸ್ವರದಲ್ಲಿ ಕುರ್‌ಆನ್ ಪಠಿಸುತ್ತಾ ನಿರ್ವಹಿಸಬೇಕಾದ ನಮಾಝ್‌ಗಳು. ಇವುಗಳನ್ನು 'ಜಹ್ರೀ' ನಮಾಝ್‌ಗಳೆಂದು ಕರೆಯಲಾಗುತ್ತದೆ. ಇತರ ನಮಾಝ್‌ಗಳಲ್ಲಿ ಮೆಲುದನಿಯಲ್ಲಿ ಕುರ್‌ಆನ್ ಪಠಣ ಮಾಡಬೇಕಾದುದು ವಾಜಿಬ್ ಆಗಿದೆ. ಅವುಗಳನ್ನು 'ಸಿರ್ರೀ' ನಮಾಝ್‌ಗಳೆಂದು ಕರೆಯಲಾಗುತ್ತದೆ.

12. 'ಅಸ್ಸಲಾಮು ಅಲೈಕುಮ್' ಎಂಬ ನುಡಿಗಳೊಂದಿಗೆ ನಮಾಝನ್ನು ಸಮಾಪ್ತಿಗೊಳಿಸುವುದು.

13. ವಿತ್ರ್ ನಮಾಝ್‌ನಲ್ಲಿ 'ಕುನೂತ್'ನ ಮುಂಚೆ ತಕ್ಬೀರ್ ಹೇಳುವುದು ಮತ್ತು ಆ ಬಳಿಕ 'ಕುನೂತ್' ಓದುವುದು.

14. ಎರಡು ಈದ್‌ಗಳ ನಮಾಝ್‌ನಲ್ಲಿ ಹೆಚ್ಚುವರಿ ತಕ್ಬೀರ್‌ಗಳನ್ನು ಹೇಳುವುದು.

ನಮಾಝ್‌ನ ಸುನ್ನತ್‌ಗಳು

ಪ್ರವಾದಿವರ್ಯರು(ಸ) ನಮಾಝ್‌ನಲ್ಲಿ ಕೆಲವು ವಿಶೇಷ ನಿಯಮಗಳನ್ನು ಪಾಲಿಸುತ್ತಿದ್ದರು. ಆದರೆ ಅವೆಲ್ಲಾ ಕಡ್ಡಾಯ ಅಥವಾ ವಾಜಿಬ್‌ಗಳೆಂದು ಹೇಳುವಂತಿಲ್ಲ. ಅಂತಹ ನಿಯಮಗಳನ್ನು ಸುನ್ನತ್‌ಗಳೆಂದು ಕರೆಯಲಾಗುತ್ತದೆ. ಈ ಪೈಕಿ ಯಾವುದಾದರೂ ಅಂಶವು ಬಿಟ್ಟು ಹೋದರೆ ನಮಾಝ್ ಅಸಿಂಧುವಾಗಿ ಬಿಡುವುದಿಲ್ಲ. ಸಜ್ದಯೆ ಸಹೂ ಕೂಡಾ ವಾಜಿಬ್ ಆಗುವುದಿಲ್ಲ. ಆದರೆ ಉದ್ದೇಶಪೂರ್ವಕವಾಗಿ ಅಥವಾ ಅನಗತ್ಯವಾಗಿ ಈ ನಿಯಮಗಳನ್ನು ನಿರ್ಲಕ್ಷಿಸಬಾರದು.

ನಮಾಝ್‌ನಲ್ಲಿ ಇಂತಹ 21 ಸುನ್ನತ್‌ಗಳಿದ್ದು ಅವುಗಳ ವಿವರ ಹೀಗಿದೆ:

1. ತಕ್ಬೀರೆ ತಹ್ರೀಮಾ ಅಥವಾ ನಮಾಝ್‌ನ ಪ್ರಥಮ ತಕ್ಬೀರ್ ಹೇಳುವ ಮುಂಚೆ ಎರಡೂ ಕೈಗಳನ್ನು ಮೇಲೆತ್ತುವುದು. (ಪುರುಷರು ತಮ್ಮ ಕಿವಿಗಳ ವರೆಗೆ, ಸ್ತ್ರೀಯರು ತಮ್ಮ ಭುಜಗಳ ವರೆಗೆ)

2. ಈ ರೀತಿ ಕೈ ಎತ್ತುವಾಗ ಎರಡೂ ಹಸ್ತಗಳನ್ನು ಕಿಬ್ಲಾದ ಕಡೆಗೆ ಮುಖ ಮಾಡಿಡುವುದು ಮತ್ತು ಬೆರಳುಗಳನ್ನು ಸಾಮಾನ್ಯ ಸ್ಥಿತಿಯಂತೆ ತೆರೆದಿಡುವುದು.

3. ಪ್ರಥಮ ತಕ್ಬೀರ್ ಹೇಳಿದ ಬಳಿಕ ಕೈ ಕಟ್ಟಿಕೊಳ್ಳುವುದು. ಪುರುಷರು ತಮ್ಮ ನಾಭಿಯ ಬಳಿ ಮತ್ತು ಸ್ತ್ರೀಯರು ತಮ್ಮ ಎದೆಯ ಮೇಲೆ ಕೈಕಟ್ಟಿಕೊಳ್ಳಬೇಕು. ಕೈಕಟ್ಟಿಕೊಳ್ಳುವುದೆಂದರೆ, ಬಲ ಹಸ್ತವನ್ನು ಎಡ ಹಸ್ತದ ಹಿಂಬದಿಯ ಮೇಲಿಟ್ಟು ಬಲ ಹಸ್ತದ ಹೆಬ್ಬೆರಳು ಹಾಗೂ ಕಿರುಬೆರಳಿನಿಂದ ಎಡಹಸ್ತದ ಮಣಿಗಂಟನ್ನು ಹಿಡಿದುಕೊಳ್ಳುವುದು. ಈ ವೇಳೆ ಬಲಹಸ್ತದ ಉಳಿದ ಮೂರು ಬೆರಳುಗಳು ಎಡಗೈಯ ಮಣಿಗಂಟಿನ ಮೇಲ್ಭಾಗಕ್ಕೆ ತಾಗಿಕೊಂಡಿರಬೇಕು. ಮಹಿಳೆಯರು ಈ ರೀತಿ ಎಡಹಸ್ತದ ಮಣಿಗಂಟನ್ನು ಹಿಡಿದುಕೊಂಡಿರಬೇಕೆಂಬ ನಿಯಮವಿಲ್ಲ.

4. ಪ್ರಥಮ ತಕ್ಬೀರ್ ಹೇಳುವಾಗ ತಲೆ ಬಾಗಿಸದೆ ಇರುವುದು.

5. ಇಮಾಮ್ ಅಥವಾ ನಮಾಝ್‌ನ ನೇತೃತ್ವ ವಹಿಸಿದವರು ತಕ್ಬೀರೆ ತಹ್ರೀಮಾ ಮತ್ತು ಇತರ ತಕ್ಬೀರ್‌ಗಳನ್ನು ಉಚ್ಚ ಸ್ವರದಲ್ಲಿ ಹೇಳುವುದು.

6. ಸನಾ ಅಂದರೆ ತಕ್ಬೀರೆ ತಹ್ರೀಮಾದ ಬಳಿಕ ಈ ರೀತಿ ಪಠಿಸುವುದು:

سُبْحَانَكَ اَللّٰهُمَّ وَبِحَمْدِكَ وَتَبَارَكَ اسْمُكَ

وَتَعَالٰى جَدُّكَ وَلَا اِلٰهَ غَيْرُكَ

"ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ವತಬಾರಕಸ್ಮುಕ ವತಆಲಾ ಜದ್ದುಕ, ವಲಾ ಇಲಾಹ ಗೈರುಕ."

(ಓ ಅಲ್ಲಾಹ್! ನೀನು ಪಾವನ ಹಾಗೂ ನಿಷ್ಕಳಂಕನಾಗಿರುವೆ, ನಿನ್ನ ಪ್ರಶಂಸೆಯೊಂದಿಗೆ ಮತ್ತು ನಿನ್ನ ನಾಮವು ಪಾವನವಾಗಿದೆ. ನಿನ್ನ ಸ್ಥಾನವು ಪರಮೋನ್ನತವಾಗಿದೆ ಮತ್ತು ನಿನ್ನ ಹೊರತು ಆರಾಧನಾರ್ಹರು ಬೇರೆ ಇಲ್ಲ.)

7. ತಅವ್ವುದ್-ಅರ್ಥಾತ್

اَعُوْذُ بِاللّٰهِ مِنَ الشَّيْطَانِ الرَّجِيْمِ

"ಅವೂದು ಬಿಲ್ಲಾಹಿ ಮಿನಶ್ಶೈತಾನಿರ್ರಜೀಮ್" (ಶಪಿತ ಶೈತಾನನ ದುಷ್ಟತೆಯಿಂದ ನಾನು ಅಲ್ಲಾಹನ ಅಭಯ ಬೇಡುತ್ತೇನೆ) ಎಂದು ಪಠಿಸುವುದು.

8. ತಸ್ಮಿಯಾ- ಅರ್ಥಾತ್ ಫಾತಿಹಾ ಓದುವ ಮುಂಚೆ ಪ್ರತಿ ರಕಅತ್‌ನಲ್ಲಿ

بِسْمِ اللّٰهِ الرَّحْمٰنِ الرَّحِيْمِ

"ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್" (ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ) ಎಂದು ಪಠಿಸುವುದು.

9. ಫರ್ಝ್ ನಮಾಝ್‌ಗಳ ಮೂರನೆಯ ಹಾಗೂ ನಾಲ್ಕನೆಯ ರಕಅತ್‌ಗಳಲ್ಲಿ ಸೂರಃ ಫಾತಿಹಾವನ್ನು ಮಾತ್ರ ಓದುವುದು.

10. ಆಮೀನ್- ಅರ್ಥಾತ್ ಇಮಾಮ್ ಮತ್ತು ಮುಕ್ತದೀ ಅಂದರೆ ನಮಾಝ್‌ನ ನೇತೃತ್ವ ವಹಿಸಿದವರು ಮತ್ತು ಹಿಂಬಾಲಕರು ಇಬ್ಬರೂ ಸೂರಃ ಫಾತಿಹಾ ಓದಿದ ಬಳಿಕ 'ಆಮೀನ್'(ಅಲ್ಲಾಹನೇ ಸ್ವೀಕರಿಸು) ಎನ್ನುವುದು. ಇಮಾಮ್ ಸೂರಃ ಫಾತಿಹಾವನ್ನು ಉಚ್ಚ ಸ್ವರದಲ್ಲಿ ಓದುವಂತಹ ನಮಾಝ್‌ಗಳಲ್ಲೂ ಮುಕ್ತದೀಗಳು 'ಆಮೀನ್' ಎಂದು ಮೆಲುದನಿಯಲ್ಲೇ ಹೇಳಬೇಕು.

11. ಸನಾ, ತಅವ್ವುದ್, ತಸ್ಮಿಯಾ ಮತ್ತು ಆಮೀನ್ ಇವೆಲ್ಲವನ್ನೂ ಮೆಲುದನಿಯಲ್ಲೇ ಹೇಳುವುದು.

12. ಕುರ್‌ಆನ್ ಪಠಣವನ್ನು ಸುನ್ನತ್ ವಿಧಾನದಂತೆಯೇ ಮಾಡುವುದು.

13. ರುಕೂಅ್‌ಗಳಲ್ಲಿ ಕನಿಷ್ಠ ಮೂರು ಸಲ

سُبْحَانَ رَبِّيَ الْعَظِيم

"ಸುಬ್‌ಹಾನ ರಬ್ಬಿಯಲ್ ಅಝೀಮ್"(ಅತಿ ಮಹಾನನಾದ ನನ್ನ ಪ್ರಭು ಅತ್ಯಂತ ಪಾವನನು)

ಮತ್ತು ಸುಜೂದ್‌ಗಳಲ್ಲಿ ಕನಿಷ್ಠ ಮೂರು ಸಲ

سُبْحَانَ رَبِّيَ الْاَعْلٰى

"ಸುಬ್‌ಹಾನ ರಬ್ಬಿಯಲ್ ಅಅ್‌ಲಾ" (ಅತ್ಯುನ್ನತನಾದ ನನ್ನ ಪ್ರಭು ಅತ್ಯಂತ ಪಾವನನು) ಎಂದು ಹೇಳುವುದು.

14. ರುಕೂಅ್‌ನಲ್ಲಿ ತಲೆ ಮತ್ತು ಸೊಂಟವನ್ನು ಸರಿಯಾಗಿ ಒಂದೇ ಮಟ್ಟದಲ್ಲಿ ಇಟ್ಟುಕೊಳ್ಳುವುದು ಮತ್ತು ಕೈಗಳಿಂದ ಮೊಣಕಾಲನ್ನು ಹಿಡಿದುಕೊಳ್ಳುವುದು.

15. ಕೌಮದಲ್ಲಿ ಅಂದರೆ ಇಮಾಮ್ ರುಕೂಅ್‌ನಿಂದ ತಲೆ ಎತ್ತಿದ ಬಳಿಕ 'ತಸ್ಮೀಅ್'

سَمِعَ اللّٰهُ لِمَنْ حَمِدَهُ،

"ಸಮಿಅಲ್ಲಾಹು ಲಿಮನ್ ಹಮಿದಃ"(ಅಲ್ಲಾಹನು ತನ್ನ ಪ್ರಶಂಸೆ ಮಾಡಿದಾತನ ಮನವಿಯನ್ನು ಆಲಿಸಿದನು) ಎಂದು ಹೇಳುವುದು ಮತ್ತು ಮುಕ್ತದೀಗಳು 'ತಹ್ಮೀದ್' ಅಂದರೆ

رَبَّنَا لَكَ الْحَمْدُ

"ರಬ್ಬನಾ ಲಕಲ್ ಹಮ್ದ್" (ಓ ನಮ್ಮ ಪ್ರಭೂ! ಪ್ರಶಂಸೆಗಳೆಲ್ಲಾ ನಿನಗೇ ಮೀಸಲು) ಎಂದು ಹೇಳುವುದು.

ಒಬ್ಬಂಟಿಯಾಗಿ ನಮಾಝ್ ನಿರ್ವಹಿಸುವವರು ತಸ್ಮೀಅ್ ಮತ್ತು ತಹ್ಮೀದ್ ಇವೆರಡನ್ನೂ ಹೇಳುವುದು.

16. ಸುಜೂದ್ ಮಾಡುವಾಗ ಅಂದರೆ ಸಾಷ್ಟಾಂಗವೆರಗುವಾಗ ಮೊದಲು ಮೊಣಕಾಲುಗಳನ್ನು ನೆಲಕ್ಕೂರಿ ಆ ಬಳಿಕ ಎರಡೂ ಕೈಗಳನ್ನು ನೆಲಕ್ಕೂರಿ ತರುವಾಯ ಮೂಗನ್ನು ಮತ್ತು ಆ ಬಳಿಕ ಹಣೆಯನ್ನು ನೆಲಕ್ಕೆ ತಾಗಿಸುವುದು.

17. ಸುಜೂದ್‌ಗಳ ಮಧ್ಯೆ (ಜಲ್ಸಾ) ಮತ್ತು ಅತ್ತಹಿಯ್ಯಾತ್‌ಗೆ ಕುಳಿತುಕೊಳ್ಳುವಾಗ(ಕಅ್‌ದ) ಎಡಪಾದವನ್ನು ಹರಡಿ ಅದರ ಮೇಲೆ ಕುಳಿತುಕೊಳ್ಳುವುದು. ಬಲ

ಪಾದವನ್ನು ನೇರವಾಗಿಟ್ಟು, ಅದರ ಬೆರಳ ತುದಿಗಳನ್ನು ಕಿಬ್ಲಾದ ದಿಕ್ಕಿಗಿರುವಂತೆ ಇಡುವುದು. ಎರಡೂ ಹಸ್ತಗಳನ್ನು ಮೊಣಕಾಲುಗಳ ಮೇಲೆ ಇಟ್ಟುಕೊಳ್ಳುವುದು.

18. ತಶಹ್ಹುದ್‌ನಲ್ಲಿ "ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್" ಎಂದು ಹೇಳುವಾಗ ಬಲಗೈಯ ತೋರುಬೆರಳಿನಿಂದ 'ಒಂದು' ಎಂದು ಸೂಚಿಸುವುದು.

19. ಕಅ್‌ದಯೆ ಅಖೀರಾದಲ್ಲಿ ಅಂದರೆ ಕೊನೆಯ ರಕಅತ್‌ನ ಕೊನೆಯಲ್ಲಿ ತಶಹ್ಹುದ್‌ನ ಬಳಿಕ ದರೂದ್ ಶರೀಫ್ ಓದುವುದು.

20. ದರೂದ್ ಶರೀಫ್‌ನ ಬಳಿಕ ಸುನ್ನತ್‌ಗೆ ಅನುಸಾರವಾಗಿರುವ ಯಾವುದಾದರೂ ದುಆವನ್ನು ಪಠಿಸುವುದು.

21. ಮೊದಲು ಬಲಭಾಗದೆಡೆಗೆ ಮುಖ ತಿರುಗಿಸಿ, ಆ ಬಳಿಕ ಎಡಭಾಗದೆಡೆಗೆ ಮುಖ ತಿರುಗಿಸಿ ಹೀಗೆ ಎರಡು ಸಲ "ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್" ಎಂದು ಹೇಳಿ ನಮಾಝ್ ಸಮಾಪ್ತಿ ಮಾಡುವುದು.

ನಮಾಝ್‌ನ ಮುಸ್ತಹಬ್(ಅಪೇಕ್ಷಿತ ಅಂಶ)ಗಳು

ನಮಾಝ್‌ನಲ್ಲಿ 5 ಅಂಶಗಳು ಮುಸ್ತಹಬ್ (ಅಪೇಕ್ಷಿತ, ಪ್ರಶಂಸನೀಯ) ಆಗಿವೆ. ಅಂದರೆ ಅವುಗಳನ್ನು ಪಾಲಿಸಿದರೆ ಪುಣ್ಯವಿದೆ. ಪಾಲಿಸದಿದ್ದರೆ ದೋಷವಿಲ್ಲ.

1. ಪುರುಷರು ಕಂಬಳಿ, ಶಾಲು ಇತ್ಯಾದಿಯೇನಾದರೂ ಹೊದ್ದುಕೊಂಡಿದ್ದರೆ ಪ್ರಥಮ ತಕ್ಬೀರ್ (ತಹ್ರೀಮಾ) ಹೇಳುವಾಗ ಶಾಲಿನಿಂದ ಕೈಯನ್ನು ಹೊರತೆಗೆಯುವುದು. ಆದರೆ ಸ್ತ್ರೀಯು ತಾನು ಹೊದ್ದಿರುವ ವಸ್ತ್ರದಿಂದ ಕೈಯನ್ನು ಹೊರತೆಗೆಯದೆ ಒಳಗಿಂದಲೇ ಕೈ ಎತ್ತುವುದು.

2. ನಿಂತಿರುವಾಗ ಸಾಷ್ಟಾಂಗವೆರಗುವ ಸ್ಥಳದ ಮೇಲೆ, ಬಾಗಿರುವಾಗ ಪಾದಗಳ ಮೇಲೆ, ಕುಳಿತಿರುವಾಗ ಮೊಣಕಾಲುಗಳ ಮೇಲ್ಭಾಗದ ಮೇಲೆ ಮತ್ತು ಕೊನೆಯಲ್ಲಿ ಸಲಾಮ್ ಹೇಳುವಾಗ ಭುಜಗಳ ಮೇಲೆ ದೃಷ್ಟಿ ನೆಟ್ಟಿಕೊಂಡಿರುವುದು.

3. ಒಂಟಿಯಾಗಿ ನಮಾಝ್ ಮಾಡುವಾಗ, ರುಕೂಅ್ ಮತ್ತು ಸುಜೂದ್‌ಗಳಲ್ಲಿ ಮೂರಕ್ಕಿಂತ ಹೆಚ್ಚು ಸಲ ತಸ್ಬೀಹ್‌ಗಳನ್ನು ಹೇಳುವುದು.

4. ನಮಾಝ್‌ನಲ್ಲಿ ಕೆಮ್ಮು ಬರದಂತೆ ತಡೆಯಲು ಪ್ರಯತ್ನಿಸುವುದು.

5. ನಮಾಝ್‌ನಲ್ಲಿ ಆಕಳಿಕೆ ಸಾಧ್ಯವಾದಷ್ಟು ತಡೆಯಲು ಪ್ರಯತ್ನಿಸುವುದು. ಸಾಧ್ಯವಾಗದಿದ್ದರೆ ಆಕಳಿಸುವಾಗ ತಾನು ನಿಂತ ಸ್ಥಿತಿಯಲ್ಲಿದ್ದರೆ ತನ್ನ ಬಲ ಹಸ್ತವನ್ನೂ, ಬೇರಾವುದೇ ಸ್ಥಿತಿಯಲ್ಲಿದ್ದರೆ ಎಡಹಸ್ತದ ಹಿಂಬದಿಯನ್ನೂ ಬಾಯಿಗೆ ಅಡ್ಡ ಹಿಡಿಯುವುದು.

ನಮಾಝನ್ನು ಭಂಗಗೊಳಿಸುವ ಅಂಶಗಳು

ನಮಾಝ್ ಮುರಿಯುವುದಕ್ಕೆ ಕಾರಣವಾಗುವ ಅಂಶಗಳನ್ನು ನಮಾಝಿನ "ಮುಫ್ಸಿದಾತ್" ಎಂದು ಕರೆಯಲಾಗುತ್ತದೆ. ಅಂತಹ 15 ಅಂಶಗಳಿದ್ದು, ಅವು ಸಂಭವಿಸಿದರೆ ನಮಾಝನ್ನು ಇನ್ನೊಮ್ಮೆ ನಿರ್ವಹಿಸಬೇಕಾಗುತ್ತದೆ. ಆ ಅಂಶಗಳ ವಿವರ ಹೀಗಿವೆ:

1. ನಮಾಝ್‌ನಲ್ಲಿ ಮರೆವಿನಿಂದ ಅಥವಾ ಉದ್ದೇಶಪೂರ್ವಕವಾಗಿ ಯಾವುದಾದರೂ ಕಡ್ಡಾಯ ಅಂಶವನ್ನು ಬಿಟ್ಟು ಬಿಡುವುದು. ಉದಾ: ರುಕೂಅ್ ಮಾಡದಿದ್ದರೆ ಅಥವಾ ಸುಜೂದ್ ಮಾಡದಿದ್ದರೆ ನಮಾಝನ್ನು ಇನ್ನೊಮ್ಮೆ ನಿರ್ವಹಿಸಬೇಕಾಗುವುದು.

2. ನಮಾಝ್‌ನ ಪೂರ್ವಶರತ್ತುಗಳ ಪೈಕಿ ಯಾವುದಾದರೂ ಒಂದಂಶ ಬಿಟ್ಟು ಹೋಗುವುದು ಅಥವಾ ಮುರಿದು ಹೋಗುವುದು. ಉದಾ: ವುಝೂ ಮಾಡದೆ ನಮಾಝ್ ನಿರ್ವಹಿಸಿದ್ದರೆ ಅಥವಾ ನಮಾಝ್ ಆರಂಭವಾದ ಬಳಿಕ ವುಝೂ ಮುರಿದರೆ ಅಥವಾ ಸತ್ರ್ ಗೋಚರಿಸಿದರೆ ಆ ನಮಾಝ್ ಅಸಿಂಧುವಾಗಿ, ಮತ್ತೊಮ್ಮೆ ನಮಾಝ್ ನಿರ್ವಹಿಸಬೇಕಾಗುವುದು.

3. ವಾಜಿಬ್ ಅಂಶಗಳ ಪೈಕಿ ಯಾವುದಾದರೂ ಒಂದು ಅಥವಾ ಹೆಚ್ಚಿನ ಅಂಶಗಳು ಬಿಟ್ಟು ಹೋದರೆ ನಮಾಝ್ ಅಸಿಂಧುವಾಗುವುದು.

4. ಮರೆವಿನಿಂದಾಗಿ ಯಾವುದಾದರೂ ವಾಜಿಬ್ ಅಂಶವು ಬಿಟ್ಟು ಹೋಗಿದ್ದು, ಆ ಬಳಿಕ 'ಸಜ್ದಯೆ ಸಹೂ' ಮಾಡದೆ ಇದ್ದರೆ ನಮಾಝ್ ಅಸಿಂಧುವಾಗುವುದು.

5. ಪ್ರೌಢಾವಸ್ಥೆಗೆ ತಲುಪಿದ ಒಬ್ಬ ವ್ಯಕ್ತಿ ಜನಾಝಾ ನಮಾಝ್‌ನ ಹೊರತು ಬೇರಾವುದೇ ನಮಾಝ್‌ನಲ್ಲಿ ಗಹಗಹಿಸಿ ನಕ್ಕರೆ ನಮಾಝ್ ಅಸಿಂಧುವಾಗುವುದು.

6. ನಮಾಝ್‌ನಲ್ಲಿ ಯಾರ ಜೊತೆಗಾದರೂ ಮಾತನಾಡಿದರೆ ಅಥವಾ ಯಾರದೇ ಮಾತಿಗೆ ಉತ್ತರ ಕೊಟ್ಟರೆ ಅಥವಾ ಸಂದರ್ಭ ಪ್ರಜ್ಞೆಯಿಲ್ಲದೆ ಯಾವುದಾದರೂ ದಿಕ್ರ್, ತಸ್ಬೀಹ್‌ಗಳಲ್ಲಿ ತಲ್ಲೀನನಾಗಿ ಬಿಟ್ಟರೆ ಅಥವಾ ಯಾವುದಾದರೂ ಪ್ರಾಣಿಯನ್ನುದ್ದೇಶಿಸಿ ಏನಾದರೂ ಮಾಡಲು ಅಥವಾ ಮಾಡದಿರಲು ಹೇಳಿದರೆ ನಮಾಝ್ ಅಸಿಂಧುವಾಗುವುದು.

7. ನಮಾಝ್ ನಿರ್ವಹಿಸುತ್ತಿರುವಾಗ ಕುರ್‌ಆನನ್ನು ನೋಡುತ್ತಾ ಕುರ್‌ಆನ್ ಪಠಿಸುವುದು.

8. ನಮಾಝ್‌ನಲ್ಲಿ ಕುರ್‌ಆನ್ ಪಠಿಸುವಾಗ ವಾಕ್ಯದ ಅರ್ಥವೇ ಬದಲಾಗಿ ಬಿಡುವಂತಹ ಯಾವುದಾದರೂ ದೊಡ್ಡ ತಪ್ಪು ಮಾಡುವುದು.

9. ನಮಾಝ್‌ನಲ್ಲಿ ಉದ್ದೇಶಪೂರ್ವಕವಾಗಿ ಅಥವಾ ನಮಾಝ್‌ನಲ್ಲಿದ್ದೇನೆಂಬ ಅರಿವಿಲ್ಲದೆ ಏನಾದರೂ ತಿನ್ನುವುದು ಅಥವಾ ಕುಡಿಯುವುದು.

10. ಯಾವುದಾದರೂ ಬಲವಾದ ಕಾರಣವಿಲ್ಲದೆ ನಮಾಝ್‌ನಲ್ಲಿ ಕೆಲವು ಹೆಜ್ಜೆ ನಡೆಯುವುದು.

11. ಹೊರಗಿನಿಂದ ನೋಡುವವರಿಗೆ, ಈ ವ್ಯಕ್ತಿ ನಮಾಝ್ ನಿರ್ವಹಿಸುತ್ತಿಲ್ಲ ಎಂದು ಭಾಸವಾಗುವಂತಹ ಯಾವುದಾದರೂ ಕೆಲಸವನ್ನು ನಮಾಝ್‌ನಲ್ಲಿರುವಾಗ ನಿರ್ವಹಿಸುವುದರಿಂದ ನಮಾಝ್ ಅಸಿಂಧುವಾಗುತ್ತದೆ. ಉದಾ: ಒಬ್ಬ ವ್ಯಕ್ತಿ ನಮಾಝ್ ನಲ್ಲೇ ತನ್ನ ಅಂಗಿ ಕಳಚಿ ಮಡಚಲಾರಂಭಿಸುವುದು ಅಥವಾ ತಲೆ ಬಾಚಲಾರಂಭಿಸುವುದು. ಇದನ್ನು 'ಅಮಲೆ ಕಸೀರ್' ಎನ್ನುತ್ತಾರೆ.

12. ಯಾವುದಾದರೂ ಸಂಕಟ ಅಥವಾ ದುಃಖದ ಕಾರಣ ಜೋರಾಗಿ ರೋದಿಸಲಾರಂಭಿಸುವುದು.

13. ಮಹಿಳೆಯು ಪುರುಷನ ಜೊತೆಗೆ ನಿಂತುಕೊಳ್ಳುವುದು.

14. ನಮಾಝ್‌ನಲ್ಲಿರುವಾಗ ಯಾವುದಾದರೂ ಭಿತ್ತಿ ಪತ್ರ ಅಥವಾ ಪತ್ರದ ಮೇಲೆ ದೃಷ್ಟಿ ಬಿದ್ದು ಅದನ್ನು ಉಚ್ಚರಿಸಿ ಓದಲಾರಂಭಿಸಿದರೆ ನಮಾಝ್ ಅಸಿಂಧುವಾಗುವುದು. ಉಚ್ಚರಿಸದೆ ಕೇವಲ ಬರಹವನ್ನು ನೋಡಿ ಅದರಲ್ಲಿನ ವಿಷಯವನ್ನು ಗ್ರಹಿಸಿಕೊಂಡರೆ ನಮಾಝ್ ಅಸಿಂಧುವಾಗುವುದಿಲ್ಲ.

15. ಯಾವುದೇ ಅನಿವಾರ್ಯತೆಯಿಲ್ಲದೆ ಬೇಕುಬೇಕೆಂದೇ ಕೆಮ್ಮಲಾರಂಭಿಸಿದರೆ ಅದರಿಂದ ನಮಾಝ್ ಅಸಿಂಧುವಾಗುತ್ತದೆ.

❑


ನಮಾಝ್‌ನ ವಿಧಾನ

ನಮಾಝ್‌ಗೆ ಸಂಬಂಧಿಸಿದ ಹೆಚ್ಚಿನೆಲ್ಲಾ ಮಾಹಿತಿಗಳನ್ನು ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ವಿವರವಾಗಿ ತಿಳಿಸಲಾಗಿದೆ. ಇಲ್ಲಿ ಸಂಕ್ಷಿಪ್ತವಾಗಿ ಅವುಗಳನ್ನೇ ಕ್ರಮವಾಗಿ ಮುಂದಿಡಲಾಗಿದೆ:

ನಮಾಝ್ ಮಾಡಲು ನಿರ್ಧರಿಸಿದಾಗ ಮೊದಲು, ಶರೀರವನ್ನು ಎಲ್ಲ ಮಾಲಿನ್ಯಗಳಿಂದ ಮುಕ್ತಿಗೊಳಿಸಿ ಶುಚಿಯಾಗಿರಿ.

ಶುದ್ಧವಾದ ಸತ್ರ್ ಮರೆಸುವ ವಸ್ತ್ರ ಧರಿಸಿ ಶುದ್ಧವಾದ ಸ್ಥಳದಲ್ಲಿ ಕಿಬ್ಲಾದ ಕಡೆಗೆ ಮುಖಮಾಡಿ ನಿಂತುಕೊಳ್ಳಿರಿ. ನಿಲ್ಲುವಾಗ ಎರಡು ಪಾದಗಳ ನಡುವೆ ಸುಮಾರು ನಾಲ್ಕು ಇಂಚು ಅಂತರವಿರಬೇಕು. ಯಾವ ನಮಾಝ್ ಮಾಡಬಯಸುತ್ತೀರೋ ಅದರ ನಿಯ್ಯತ್(ಸಂಕಲ್ಪ) ಮಾಡಿರಿ. ಉದಾ: ಕಡ್ಡಾಯವಾದ ಫಜ್ರ್ ನಮಾಝನ್ನು ಅಲ್ಲಾಹನಿಗಾಗಿ ನಿರ್ವಹಿಸುತ್ತೇವೆ ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುವುದು. ಇದನ್ನು ಬಾಯಲ್ಲೂ ಉಚ್ಚರಿಸಿದರೆ ಒಳ್ಳೆಯದು.

ಎರಡೂ ಕೈಗಳನ್ನು ಕಿವಿಯ ಮಟ್ಟಕ್ಕೆ ಮೇಲೆತ್ತಿರಿ. ಹಸ್ತಗಳು ಮತ್ತು ಬೆರಳುಗಳ ಮುಂಭಾಗವು ಕಿಬ್ಲಾದ ಕಡೆಗಿರಲಿ. ಹೆಬ್ಬೆರಳುಗಳು ಕಿವಿಯ ಕೆಳ ತುದಿಯ ಮಟ್ಟಗಿರಲಿ ಮತ್ತು ಬೆರಳುಗಳು ತೆರೆದಿರಲಿ. (ಪರಸ್ಪರ ಅಂಟಿಕೊಂಡಂತೆ ಇರಬಾರದು) ಆ ಬಳಿಕ 'ಅಲ್ಲಾಹು ಅಕ್ಬರ್' ಎನ್ನುತ್ತಾ ಎರಡೂ ಕೈಗಳನ್ನು ನಾಭಿಯ ಸಮೀಪ ಇಡಿರಿ. ಬಲಗೈಯ ಹೆಬ್ಬೆರಳು ಮತ್ತು ಕಿರು ಬೆರಳಿನಿಂದ ಎಡಗೈಯ ಮಣಿಗಂಟನ್ನು ಹಿಡಿದುಕೊಳ್ಳಿರಿ. ಬಲಗೈಯ ಮಧ್ಯದ ಮೂರು ಬೆರಳುಗಳು ಎಡಗೈಯ ಮಣಿಗಂಟಿಗಿಂತ ಮೇಲಿನ ಭಾಗದಲ್ಲಿರಲಿ. ದೃಷ್ಟಿಯನ್ನು ಸುಜೂದ್‌ನ ಸ್ಥಳದಲ್ಲಿಡಿರಿ.




ಹೀಗೆ ಕೈಕಟ್ಟಿ ಮೆಲುದನಿಯಲ್ಲಿ 'ಸನಾ' ಓದಿರಿ. ಆ ಬಳಿಕ 'ತಅವ್ವುದ್'(ಅವೂದು ಬಿಲ್ಲಾಹಿ...) ಮತ್ತು 'ತಸ್ಮಿಯಾ'(ಬಿಸ್ಮಿಲ್ಲಾಹಿ....) ಓದಿರಿ. ಅನಂತರ ಸೂರಃ ಫಾತಿಹಾ ಪಠಿಸಿರಿ. ಫಾತಿಹಾ ಮುಗಿದಾಗ ಮೆಲುದನಿಯಲ್ಲಿ 'ಆಮೀನ್' ಹೇಳಿರಿ. ಅನಂತರ ಕುರ್‌ಆನಿನ ಯಾವುದಾದರೂ ಸೂರಃವನ್ನು ಅಥವಾ ಒಂದು ದೀರ್ಘ ವಾಕ್ಯವನ್ನು ಅಥವಾ ಮೂರು ಚಿಕ್ಕ ವಾಕ್ಯಗಳನ್ನು ಓದಿರಿ.

(ನೀವು ಇಮಾಮ್‌ರೊಂದಿಗೆ ನಮಾಝ್ ಮಾಡುವುದಾದರೆ ಸನಾ ಓದಿದ ಬಳಿಕ ಮೌನವಾಗಿ ನಿಲ್ಲಿರಿ. ತಅವ್ವುದ್, ತಸ್ಮಿಯಾ, ಫಾತಿಹಾ, ಸೂರಃ ಯಾವುದನ್ನೂ ಓದಬೇಡಿ)


ಕುರ್‌ಆನ್ ಓದುವಾಗ ಸ್ಪಷ್ಟವಾಗಿ, ಸಾವಧಾನದಿಂದ ಓದಿರಿ. ಅವಸರಪಡಬೇಡಿರಿ.

ತರುವಾಯ 'ಅಲ್ಲಾಹು ಅಕ್ಬರ್' ಎನ್ನುತ್ತಾ ರುಕೂಅ್ ಮಾಡಿರಿ. ಬೆರಳುಗಳನ್ನು ಬಿಚ್ಚಿ ಅಂಗೈಗಳಿಂದ ಮೊಣಕಾಲುಗಳನ್ನು ಹಿಡಿದುಕೊಳ್ಳಿರಿ. ಬೆನ್ನು ಮತ್ತು ತಲೆ ಒಂದೇ ಮಟ್ಟದಲ್ಲಿರಲಿ. ಕಾಲುಗಳು ನೇರವಾಗಿ ಸೆಟೆದು ನಿಂತಿರಲಿ. ಕೈಗಳು ಪಕ್ಕೆಲುಬುಗಳಿಂದ ದೂರವಿರಲಿ. ರುಕೂಅ್‌ನಲ್ಲಿ ಮೂರು ಸಲ 'ಸುಬ್‌ಹಾನ ರಬ್ಬಿಯಲ್ ಅಝೀಮ್' ಎಂದು ಹೇಳಿರಿ.



ಆ ಬಳಿಕ 'ಸಮಿಅಲ್ಲಾಹು ಲಿಮನ್ ಹಮಿದಃ'(ತಸ್ಮೀಅ್) ಹೇಳುತ್ತಾ ನೇರವಾಗಿ ನಿಂತುಕೊಳ್ಳಿರಿ. ಆ ಬಳಿಕ 'ರಬ್ಬನಾ ಲಕಲ್ ಹಮ್ದ್'(ತಹ್ಮೀದ್) ಹೇಳಿರಿ. (ಇಮಾಮ್‌ರೊಂದಿಗೆ ನಮಾಝ್ ಮಾಡುವಾಗ, ಇಮಾಮ್ ಮಾತ್ರ 'ತಸ್ಮೀಅ್' ಹೇಳಬೇಕು. ಉಳಿದವರು ಕೇವಲ 'ತಹ್ಮೀದ್' ಹೇಳಬೇಕು. ಒಂಟಿಯಾಗಿ ನಮಾಝ್ ಮಾಡುವವರು ಎರಡನ್ನೂ ಹೇಳಬೇಕು.)


ಆ ಬಳಿಕ 'ಅಲ್ಲಾಹು ಅಕ್ಬರ್' ಎನ್ನುತ್ತಾ ಸುಜೂದ್ ಮಾಡಿರಿ. ಸುಜೂದ್ ಮಾಡುವಾಗ ಕ್ರಮವಾಗಿ ಮೊದಲು ಎರಡು ಮೊಣಕಾಲುಗಳನ್ನೂ ಅನಂತರ ಎರಡು ಹಸ್ತಗಳನ್ನೂ ಅನಂತರ ಮೂಗನ್ನೂ ಆ ಬಳಿಕ ಹಣೆಯನ್ನೂ ನೆಲಕ್ಕೆ ತಾಗಿಸಿರಿ. ಮುಖವು ಎರಡು ಹಸ್ತಗಳ ನಡುವೆ ಇರಲಿ. ಹೆಬ್ಬೆರಳುಗಳು ಕಿವಿಗಳ ನೇರಕ್ಕೆ ಇರಲಿ. ಕೈಯ ಎಲ್ಲ ಬೆರಳುಗಳೂ ಹತ್ತಿರ ಹತ್ತಿರ ಇದ್ದು, ಎಲ್ಲವೂ ಕಿಬ್ಲಾದ ದಿಕ್ಕಿಗಿರಬೇಕು. ಮೊಣಕೈಗಳು ಪಕ್ಕೆಲುಬುಗಳಿಂದ ದೂರವಿರಬೇಕು. ಹೊಟ್ಟೆಯು ತೊಡೆಗಳಿಂದ ದೂರವಿರಬೇಕು. ಸುಜೂದ್‌ನಲ್ಲಿ ಮೂರು ಅಥವಾ ಐದು ಸಲ 'ಸುಬ್‌ಹಾನ ರಬ್ಬಿಯಲ್ ಅಅ್‌ಲಾ' ಎಂದು ಹೇಳಬೇಕು.



ತರುವಾಯ 'ಅಲ್ಲಾಹು ಅಕ್ಬರ್' ಎಂದು ಹೇಳುತ್ತಾ ಸುಜೂದ್‌ನಿಂದ ತಲೆ ಎತ್ತಿರಿ. ಹೀಗೆ ಮಾಡುವಾಗ ಮೊದಲು ಹಣೆಯನ್ನೂ, ಆ ಬಳಿಕ ಮೂಗನ್ನೂ ಆ ಬಳಿಕ ಕೈಗಳನ್ನೂ ನೆಲದಿಂದ ಮೇಲೆತ್ತಬೇಕು. ಸುಜೂದ್‌ನಿಂದ ಎದ್ದು ನೇರವಾಗಿ ಕುಳಿತುಕೊಳ್ಳಿರಿ. ಆ ಬಳಿಕ 'ಅಲ್ಲಾಹು ಅಕ್ಬರ್' ಎನ್ನುತ್ತಾ ಎರಡನೆಯ ಸುಜೂದ್ ಮಾಡಿರಿ. ಅನಂತರ 'ಅಲ್ಲಾಹು ಅಕ್ಬರ್' ಎನ್ನುತ್ತಾ ನೇರವಾಗಿ ನಿಂತುಕೊಳ್ಳಿರಿ. ನಿಲ್ಲುವಾಗ ಮೊದಲು ಹಣೆಯನ್ನೂ ಆ ಬಳಿಕ ಮೂಗನ್ನೂ ತರುವಾಯ ಹಸ್ತಗಳನ್ನೂ ಆ ಬಳಿಕ ಮೊಣಕಾಲುಗಳನ್ನೂ ಮೇಲೆತ್ತಿ ಹಸ್ತಗಳ ಬಲದಿಂದ ನೇರವಾಗಿ ನಿಲ್ಲಿರಿ. ಹೀಗೆ ನಿಂತು ಪುನಃ ಹಿಂದಿನಂತೆ ಕೈಕಟ್ಟಿಕೊಳ್ಳಿರಿ. (ಇಲ್ಲಿಗೆ ನಮಾಝ್‌ನ ಪ್ರಥಮ ರಕಅತ್ ಪೂರ್ಣವಾಯಿತು.)

ಎರಡನೆಯ ರಕಅತ್‌ನಲ್ಲಿ 'ಸನಾ' ಓದಲಿಕ್ಕಿಲ್ಲ. ತಅವ್ವುದ್, ತಸ್ಮಿಯಾ, ಸೂರಃ ಫಾತಿಹಾ ಮತ್ತು ಬೇರೆ ಯಾವುದಾದರೂ ಸೂರಃ ಓದಿರಿ. (ಇಮಾಮ್‌ನ ಜೊತೆಗಿದ್ದರೆ

ಏನೂ ಓದದೆ ಮೌನವಾಗಿ ನಿಂತುಕೊಳ್ಳಿರಿ) ತರುವಾಯ ಹಿಂದೆ ಹೇಳಿದ ಕ್ರಮದಂತೆ ರುಕೂಅ್ ಮಾಡಿ ನೇರ ನಿಲ್ಲಿರಿ. ಅನಂತರ ಎರಡು ಸುಜೂದ್ ಮಾಡಿರಿ.



ಹೀಗೆ ಎರಡನೇ ರಕಅತ್‌ನ ಎರಡನೇ ಸುಜೂದ್ ಕೂಡಾ ಮುಗಿದ ಬಳಿಕ ಕುಳಿತುಕೊಳ್ಳಿರಿ. ಎಡ ಪಾದವನ್ನು ಹರಡಿ ಅದರ ಮೇಲೆ ಕುಳಿತುಕೊಳ್ಳಬೇಕು. ಬಲ ಪಾದವು ನೇರ ನಿಂತಿರಬೇಕು. ಅದರ ಬೆರಳ ತುದಿಗಳು ಕಿಬ್ಲಾದ ದಿಕ್ಕಿಗೆ ಇರಬೇಕು. ಎರಡೂ ಹಸ್ತಗಳನ್ನು ಮೊಣಕಾಲಿನ ಮೇಲಿನ ಭಾಗದ ಮೇಲೆ ಇಟ್ಟುಕೊಳ್ಳಿರಿ. ಆ ಬಳಿಕ 'ಅತ್ತಹಿಯ್ಯಾತ್' ಓದಿರಿ. ಅದರ ಪದಗಳು ಹೀಗಿವೆ:

اَلتَّحِيَّاتُ لِلّٰهِ وَالصَّلَوَاتُ وَ الطَّيِّبَاتُ اَلسَّلَامُ عَلَيْكَ اَيُّهَا النَّبِيُّ وَرَحْمَةُ
اللّٰهِ وَبَرَكَاتُهُ اَلسَّلَامُ عَلَيْنَا وَعَلَى عِبَادِاللّٰهِ الصَّالِحِيْنَ

"ಅತ್ತಹಿಯ್ಯಾತು ಲಿಲ್ಲಾಹಿ ವಸ್ಸಲವಾತು ವತ್ತಯ್ಯಿಬಾತು ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹೂ ಅಸ್ಸಲಾಮು ಅಲೈನಾ ವಅಲಾ ಇಬಾದಿಲ್ಲಾಹಿಸ್ಸಾಲಿಹೀನ್."

(ಎಲ್ಲ ಬಾಯ್ದೆರೆ ಆರಾಧನಾ ಕರ್ಮಗಳು, ಎಲ್ಲ ಶಾರೀರಿಕ ಆರಾಧನಾ ಕರ್ಮಗಳು ಮತ್ತು ಎಲ್ಲ ಆರ್ಥಿಕ ಆರಾಧನಾ ಕರ್ಮಗಳು ಅಲ್ಲಾಹನಿಗೇ ಮೀಸಲು. ಓ ಪ್ರವಾದಿಗಳೇ, ಶಾಂತಿಯೂ ಅಲ್ಲಾಹನ ಅನುಗ್ರಹಗಳೂ ಅವನ ಸಮೃದ್ಧಿಯೂ ನಿಮ್ಮ ಮೇಲಿರಲಿ. ಹಾಗೆಯೇ ನಮ್ಮ ಮೇಲೂ ಅಲ್ಲಾಹನ ಎಲ್ಲ ಸಜ್ಜನ ದಾಸರ ಮೇಲೂ ಶಾಂತಿ ಇರಲಿ.)

ಆ ಬಳಿಕ ತಶಹ್ಹುದ್ ಓದಿರಿ. ಅದರ ಪದಗಳು ಹೀಗಿವೆ.

اَشْهَدُ اَنْ لَّآ اِلٰهَ اِلَّا اللّٰهُ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ"

(ಅಲ್ಲಾಹನ ಹೊರತು ಬೇರೆ ಯಾರೂ ಆರಾಧ್ಯರಿಲ್ಲವೆಂದು ನಾನು ಸಾಕ್ಷಿ ಹೇಳುತ್ತೇನೆ ಮತ್ತು ಮುಹಮ್ಮದ್(ಸ) ಅಲ್ಲಾಹನ ದಾಸರೂ ಅವನ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷಿ ಹೇಳುತ್ತೇನೆ.)

ಈ ವೇಳೆ 'ಅಶ್‌ಹದು ಅಲ್ಲಾ ಇಲಾಹ' ಎಂದು ಹೇಳುವಾಗ ಬಲಗೈಯ ಇತರೆಲ್ಲ ಬೆರಳುಗಳನ್ನು ಮಡಚಿಟ್ಟು 'ಇಲ್ಲಲ್ಲಾಹ್' ಎನ್ನುವಾಗ ತೋರುಬೆರಳನ್ನು ಎತ್ತಬೇಕು. 'ಇಲ್ಲಲ್ಲಾಹ್' ಎಂದು ಹೇಳಿದ ಬಳಿಕ ಆ ಬೆರಳನ್ನು ತಗ್ಗಿಸಿರಿ. ಆದರೆ ಮಡಚಿಟ್ಟ ಬೆರಳುಗಳು ಆ ರಕಅತ್ ಮುಗಿಯುವ ತನಕವೂ ಹಾಗೆಯೇ ಇರಲಿ.

ಕೇವಲ ಎರಡು ರಕಅತ್‌ನ ನಮಾಝ್ ಆಗಿದ್ದರೆ ತಶಹ್ಹುದ್ ಮುಗಿದ ಬಳಿಕ ದರೂದ್ ಓದಿರಿ. ಅದರ ಪದಗಳು ಹೀಗಿವೆ:

اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيمَ وَعَلٰى اٰلِ اِبْرَاهِيمَ اِنَّكَ حَمِيدٌ مَّجِيدٌ۔ اَللّٰهُمَّ بَارِكْ عَلٰى مُحَمَّدٍ وَّ عَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيمَ وَ عَلٰى اٰلِ اِبْرَاهِيمَ اِنَّكَ حَمِيدٌ مَّجِيدٌ۔

"ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್‌ರಾಹೀಮ ವ ಅಲಾ ಆಲಿ ಇಬ್‌ರಾಹೀಮ ಇನ್ನಕ ಹಮಿದುಮ್ಮಜೀದ್, ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್‌ರಾಹೀಮ ವಅಲಾ ಆಲಿ ಇಬ್‌ರಾಹೀಮ ಇನ್ನಕ ಹಮಿದುಮ್ಮಜೀದ್."

(ಓ ಅಲ್ಲಾಹ್! ನೀನು ಇಬ್‌ರಾಹೀಮ್ ಮತ್ತು ಅವರ ಸಂತತಿಯನ್ನು ಅನುಗ್ರಹಿಸಿದಂತೆ ಮುಹಮ್ಮದ್ ಮತ್ತು ಅವರ ಸಂತತಿಯನ್ನು ಅನುಗ್ರಹಿಸು. ನಿಸ್ಸಂದೇಹವಾಗಿ ನೀನು ಪ್ರಶಂಸಾರ್ಹನೂ ಮಹಾ ಗೌರವಶಾಲಿಯೂ ಆಗಿರುವೆ. ಓ ಅಲ್ಲಾಹ್! ನೀನು ಇಬ್‌ರಾಹೀಮ್ ಮತ್ತು ಅವರ ಸಂತತಿಗೆ ಸಮೃದ್ಧಿ ಪ್ರದಾನ ಮಾಡಿದಂತೆ ಮುಹಮ್ಮದ್ ಮತ್ತವರ ಸಂತತಿಗೂ ಸಮೃದ್ಧಿ ಪ್ರದಾನ ಮಾಡು. ನಿಸ್ಸಂದೇಹವಾಗಿ ನೀನು ಪ್ರಶಂಸಾರ್ಹನೂ ಮಹಾ ಗೌರವಶಾಲಿಯೂ ಆಗಿರುವೆ.)


ಆ ಬಳಿಕ ದುಆ ಓದಿರಿ. ಉದಾ: ಒಂದು ದುಆ ಹೀಗಿದೆ:

اَللّٰهُمَّ اِنِّىْ ظَلَمْتُ نَفْسِىْ ظُلْمًا كَثِيْرًا وَّلَا يَغْفِرُ الذُّنُوْبَ اِلَّا اَنْتَ
فَاغْفِرْلِىْ مَغْفِرَةً مِّنْ عِنْدِكَ وَارْحَمْنِىْ اِنَّكَ اَنْتَ الْغَفُوْرُ الرَّحِيْمُ

"ಅಲ್ಲಾಹುಮ್ಮ ಇನ್ನೀ ಝಲಮ್ತು ನಫ್ಸೀ ಝುಲ್ಮನ್ ಕಸೀರನ್ ವಲಾ ಯಗ್ಫಿರುಝ್ಝುನೂಬ ಇಲ್ಲಾ ಅಂತ ಫಗ್ಫಿರ್‌ಲೀ ಮಗ್ಫಿರತಮ್ಮಿನ್ ಇಂದಿಕ ವರ್‌ಹಮ್‌ನೀ ಇನ್ನಕ ಅಂತಲ್ ಗಫೂರುರ್ರಹೀಮ್."

(ಓ ಅಲ್ಲಾಹ್! ನಾನು ನನ್ನ ಮೇಲೆ ಬಹಳಷ್ಟು ಅಕ್ರಮವನ್ನು ಮಾಡಿಕೊಂಡಿದ್ದೇನೆ. ಪಾಪಗಳನ್ನು ಕ್ಷಮಿಸಬಲ್ಲವನು ನಿನ್ನ ಹೊರತು ಬೇರಾರೂ ಇಲ್ಲ. ನೀನು ನಿನ್ನ ವಿಶೇಷ ಕ್ಷಮಾಗುಣದಿಂದ ನನಗೆ ಕ್ಷಮೆಯನ್ನು ದಯಪಾಲಿಸು ಮತ್ತು ನನ್ನ ಮೇಲೆ ಕರುಣೆ ತೋರು. ನಿಸ್ಸಂದೇಹವಾಗಿ ನೀನು ಅತ್ಯಂತ ಕ್ಷಮಾಶೀಲನೂ ಅತ್ಯಂತ ಕರುಣಾಮಯಿಯೂ ಆಗಿರುವೆ.)

ಹೀಗೆ ದುಆ ಮಾಡಿದ ಬಳಿಕ ಮೊದಲು ಬಲಭಾಗಕ್ಕೂ ಆ ಬಳಿಕ ಎಡಭಾಗಕ್ಕೂ ಮುಖ ತಿರುಗಿಸಿ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್ ಎಂದು ಸಲಾಮ್ ಹೇಳಿರಿ.





ಮೂರು ಅಥವಾ ನಾಲ್ಕು ರಕಅತ್‌ನ ನಮಾಝ್‌ಗಳನ್ನು ನಿರ್ವಹಿಸುವಾಗ ತಶಹ್ಹುದ್‌ನ ಬಳಿಕ ದರೂದ್ ಓದುವ ಬದಲು ತಕ್ಬೀರ್ ಹೇಳುತ್ತಾ ಮುಂದಿನ ರಕಅತ್‌ಗಾಗಿ ನಿಂತುಕೊಳ್ಳಬೇಕು ಮತ್ತು ಕ್ರಮ ಪ್ರಕಾರ ಮೂರನೆಯ ರಕಅತ್ ಹಾಗೂ ನಾಲ್ಕನೆಯ ರಕಅತ್‌ಗಳನ್ನು ಮುಗಿಸಿ ಕೊನೆಯಲ್ಲಿ ಸಲಾಮ್ ಹೇಳಬೇಕು.

ಸಲಾಮ್ ಹೇಳಿ ನಮಾಝ್ ಮುಗಿಸಿದ ಬಳಿಕ ಹೀಗೆ ದುಆ ಮಾಡಿರಿ

اَللّٰهُمَّ اَنْتَ السَّلَامُ وَمِنْكَ السَّلَامُ تَبَارَكْتَ يَاذَاالْجَلَالِ وَالْاِكْرَامِ۔

"ಅಲ್ಲಾಹುಮ್ಮ ಅಂತಸ್ಸಲಾಮ್ ವಮಿನ್‌ಕಸ್ಸಲಾಮ್ ತಬಾರಕ್ತ ಯಾದಲ್ ಜಲಾಲಿ ವಲ್ ಇಕ್ರಾಮ್."

(ಓ ಅಲ್ಲಾಹ್! ನೀನೇ ಶಾಂತಿಯನ್ನು ದಯಪಾಲಿಸುವವನು. ಶಾಂತಿ (ಮತ್ತು ಸಂರಕ್ಷಣೆ) ನಿನ್ನಿಂದ ಮಾತ್ರ ಸಿಗಬಲ್ಲುದು. ಓ ಘನವಂತನೇ ಮತ್ತು ಮಹಾ ಗೌರವಾನ್ವಿತನೇ! ನೀನು ಅತ್ಯಂತ ಸಮೃದ್ಧಿಯುಳ್ಳವನಾಗಿರುವೆ.)

اَللّٰهُمَّ اَعِنِّى عَلٰى ذِكْرِكَ وَشُكْرِكَ وَحُسْنِ عِبَادَتِكَ۔

"ಅಲ್ಲಾಹುಮ್ಮ ಅಇನ್ನೀ ಅಲಾ ದಿಕ್ರಿಕ ವಶುಕ್ರಿಕ ವ ಹುಸ್ನಿ ಇಬಾದತಿಕ."

(ಓ ಅಲ್ಲಾಹ್! ನನಗೆ ನಿನ್ನ ಸ್ಮರಣೆ ಮಾಡಲು, ನಿನಗೆ ಕೃತಜ್ಞತೆ ಸಲ್ಲಿಸಲು ಮತ್ತು ಅತ್ಯುತ್ತಮ ರೀತಿಯಲ್ಲಿ ನಿನ್ನ ಆರಾಧನೆ ನಡೆಸಲು ಸಹಾಯ ಮಾಡು.)

ಜಮಾಅತ್(ಸಾಮೂಹಿಕ ನಮಾಝ್)

ಪ್ರವಾದಿ ಮುಹಮ್ಮದ್(ಸ) ತಮ್ಮ ಜೀವನದುದ್ದಕ್ಕೂ ಕಡ್ಡಾಯ ನಮಾಝ್‌ಗಳನ್ನು ಜಮಾಅತ್‌ನೊಂದಿಗೆ ಅಥವಾ ಸಾಮೂಹಿಕವಾಗಿಯೇ ನಿರ್ವಹಿಸುತ್ತಿದ್ದರು. ತಮ್ಮ ಜೀವನದ ಕೊನೆಯ ದಿನಗಳಲ್ಲಿ ತೀವ್ರ ಅನಾರೋಗ್ಯ ಪೀಡಿತರಾಗಿದ್ದ ಸ್ಥಿತಿಯಲ್ಲೂ ಅವರು ಇಬ್ಬರು ಸಹಾಯಕರ ಹೆಗಲುಗಳ ಮೇಲೆ ಕೈಯಿಟ್ಟು ಬಹಳ ಕಷ್ಟಪಟ್ಟಾದರೂ ಮಸೀದಿಗೆ ಬಂದು ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುತ್ತಿದ್ದರು.

ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸಿದರೆ ಒಬ್ಬಂಟಿಯಾಗಿ ನಮಾಝ್ ನಿರ್ವಹಿಸುವಾಗ ಸಿಗುವುದಕ್ಕಿಂತ 27 ಪಟ್ಟು ಅಧಿಕ ಪುಣ್ಯ ಸಿಗುತ್ತದೆ. ಜಮಾಅತ್‌ನಿಂದಾಗಿ ಜನರಿಗೆ ಆಗಾಗ ಪರಸ್ಪರ ಭೇಟಿಯಾಗುವ ಹಾಗೂ ಇತರರ ಸ್ಥಿತಿಗಳನ್ನು ಅರಿಯುವ ಅವಕಾಶ ಪ್ರಾಪ್ತವಾಗುತ್ತದೆ. ಜಮಾಅತ್‌ನ ಕುರಿತು ಕೆಲವು ಪ್ರಾಮುಖ್ಯ ಮಾಹಿತಿಗಳು ಹೀಗಿವೆ:

1. ಐದು ಹೊತ್ತಿನ ಕಡ್ಡಾಯ ನಮಾಝ್‌ಗಳನ್ನು ಜಮಾಅತ್‌ನೊಂದಿಗೆ ನಿರ್ವಹಿಸುವುದು ವಾಜಿಬ್ ಆಗಿದೆ.

2. ಜುಮಾ ಮತ್ತು ಎರಡು ಈದ್‌ಗಳ ನಮಾಝ್‌ಗೆ ಜಮಾಅತ್ ಶರತ್ತಾಗಿದೆ. ಅಂದರೆ ಜಮಾಅತಾಗಿ ನಿರ್ವಹಿಸದೆ, ಪ್ರತ್ಯೇಕವಾಗಿ ನಿರ್ವಹಿಸಿದರೆ ಈ ನಮಾಝ್‌ಗಳು ಸಿಂಧುವಾಗುವುದಿಲ್ಲ.

3. ರಮಝಾನ್ ತಿಂಗಳಲ್ಲಿ ತರಾವೀಹ್ ನಮಾಝನ್ನು ಜಮಾಅತ್‌ನೊಂದಿಗೆ ನಿರ್ವಹಿಸುವುದು 'ಸುನ್ನತೆ ಮುಅಕ್ಕದ' ಆಗಿದೆ. ವಿತ್ರ್ ನಮಾಝನ್ನು ಜಮಾಅತ್‌ನೊಂದಿಗೆ ನಿರ್ವಹಿಸುವುದು ಮುಸ್ತಹಬ್(ಅಪೇಕ್ಷಿತ) ಆಗಿದೆ.

ಪಂಕ್ತಿಯ ನಿಯಮಗಳು

ಜಮಾಅತ್ ಮಾಡಲು ಕನಿಷ್ಠ ಇಬ್ಬರು ವ್ಯಕ್ತಿಗಳು ಇರಬೇಕಾದುದು ಅಗತ್ಯ. ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುವಾಗ ನಮಾಝ್‌ನ ನೇತೃತ್ವ ವಹಿಸುವ

ಇಮಾಮ್ ಮುಂದೆ ನಿಲ್ಲಬೇಕು. ಮುಕ್ತದೀಗಳು ಅಥವಾ ಹಿಂಬಾಲಕರು ಆತನ ಹಿಂದೆ ಪಂಕ್ತಿ ಬದ್ಧವಾಗಿ ನಿಲ್ಲಬೇಕು.

ಇಮಾಮ್‌ನ ಹಿಂದೆ ಮೊದಲು ಪುರುಷರ ಸಾಲು, ಅದರ ಹಿಂದೆ ಮಕ್ಕಳ ಸಾಲು ಮತ್ತು ಕೊನೆಯಲ್ಲಿ ಮಹಿಳೆಯರ ಸಾಲು ಇರಬೇಕು. ಇಮಾಮ್‌ನ ಹಿಂದೆ ಒಬ್ಬನೇ ಮುಕ್ತದೀ ಇದ್ದರೆ, ಅವನು ಇಮಾಮ್‌ನ ಬಲಭಾಗದಲ್ಲಿ ತುಸು ಹಿಂದೆ ನಿಂತುಕೊಳ್ಳಬೇಕು.

ಮೊದಲ ಸಾಲು ಸಂಪೂರ್ಣವಾಗಿ ತುಂಬಿದ ಬಳಿಕ ಮಾತ್ರ ಎರಡನೆಯ ಸಾಲಿನಲ್ಲಿ ನಿಲ್ಲಬೇಕು. ಸಾಲು ನೇರವಾಗಿರಬೇಕು. ಸಾಲಿನಲ್ಲಿ ಎಲ್ಲರೂ ಹತ್ತಿರ ಹತ್ತಿರ ನಿಲ್ಲಬೇಕು. ಸಾಲಿನ ಮಧ್ಯೆ ಅಂತರವಿರಬಾರದು.

ಜಮಾಅತ್‌ನ ನಿಯಮಗಳು

ಕಡ್ಡಾಯ ನಮಾಝ್‌ಗಳನ್ನು ಯಾವಾಗಲೂ ಜಮಾಅತ್‌ನೊಂದಿಗೇ ನಿರ್ವಹಿಸಬೇಕು. ಯಾವುದಾದರೂ ಕಾರಣದಿಂದ ಮಸೀದಿಗೆ ಹೋಗಲು ತಡವಾದರೆ, ಇನ್ನು ಜಮಾಅತ್ ಸಿಗಲಿಕ್ಕಿಲ್ಲವೆಂದು ಮನೆಯಲ್ಲೇ ಕುಳಿತಿರಬಾರದು. ಆದಷ್ಟು ಬೇಗ ಮಸೀದಿಗೆ ಹೋಗಿ ಜಮಾಅತ್‌ನ ಎಷ್ಟು ಭಾಗ ಸಿಗುತ್ತದೋ ಅಷ್ಟು ಭಾಗವನ್ನು ಜಮಾಅತ್‌ನೊಂದಿಗೆ ನಮಾಝ್ ಮಾಡಿ, ಉಳಿದ ಭಾಗವನ್ನು ಇಮಾಮರು ಸಲಾಮ್ ಹೇಳಿದ ಬಳಿಕ ಎದ್ದು ನಿಂತು ಪೂರ್ತಿಗೊಳಿಸಬೇಕು.

ಇಮಾಮ್ ಫರ್ಝ್ ನಮಾಝನ್ನು ಆರಂಭಿಸಿದ ಬಳಿಕ ಯಾರೂ ಸುನ್ನತ್ ಅಥವಾ ನಫಿಲ್ ನಮಾಝ್‌ಗೆ ನಿಲ್ಲಬಾರದು. ಆದರೆ ಫಜ್ರ್ ನಮಾಝ್‌ಗೆ ಮುಂಚಿನ ಸುನ್ನತ್ ನಮಾಝ್‌ಗೆ ಬಹಳಷ್ಟು ಮಹತ್ವ ಇರುವುದರಿಂದ, ನಮಾಝ್‌ನಲ್ಲಿ ಒಂದು ರಕಅತ್‌ನಷ್ಟು ಜಮಾಅತ್ ಸಿಗುವ ಸಾಧ್ಯತೆ ಇದ್ದರೆ ಸುನ್ನತ್ ನಮಾಝ್ ನಿರ್ವಹಿಸಿಯೇ ಜಮಾಅತ್‌ಗೆ ಸೇರುವುದು ಉತ್ತಮ.

ಇಮಾಮ್ ರುಕೂಅ್‌ನ ಸ್ಥಿತಿಯಲ್ಲಿರುವಾಗ ಒಬ್ಬನು ಜಮಾಅತ್‌ಗೆ ಸೇರಿದರೆ ಅವನಿಗೆ ಆ ರಕಅತ್ ಸಂಪೂರ್ಣವಾಗಿ ಸಿಕ್ಕಿತೆಂದು ಪರಿಗಣಿಸಬೇಕು. ಆದರೆ ರುಕೂಅ್‌ನಲ್ಲಿ ಸೇರಿಕೊಳ್ಳಲಿಕ್ಕಾಗಿ ಮಸೀದಿಯೊಳಗೆ ಓಡುವುದು ಸರಿಯಲ್ಲ.

ಜುಮಾ(ಶುಕ್ರವಾರದ) ನಮಾಝ್‌ಗೆ ಇಮಾಮ್‌ನೊಂದಿಗೆ ಕನಿಷ್ಠ ಇಬ್ಬರು ಮುಕ್ತದೀಗಳು(ಹಿಂಬಾಲಕರು) ಇರಬೇಕು.

ಮಸೀದಿಯಲ್ಲಿ ಅಧಿಕೃತ ಸಾಮೂಹಿಕ ನಮಾಝ್ ಮುಗಿದ ಬಳಿಕ ಮಸೀದಿಗೆ ತಲುಪಿದವರು ಇನ್ನೊಮ್ಮೆ ಜಮಾಅತ್ ಮಾಡಿ ನಮಾಝ್ ನಿರ್ವಹಿಸಬಹುದು. ಆದರೆ ಈ ರೀತಿ ಎರಡನೆಯ ಜಮಾಅತ್ ಮಾಡುವಾಗ, ಅದರ ಇಮಾಮ್ ಹಿಂದಿನ ಜಮಾಅತ್ ನಮಾಝ್‌ನಲ್ಲಿ ಇಮಾಮ್ ನಿಂತಿದ್ದ ಸ್ಥಳದಿಂದ ದೂರ ನಿಲ್ಲಬೇಕು. ಮಸೀದಿಯ ಹೊರಭಾಗದಲ್ಲಿ ನಿಲ್ಲುವುದು ಉತ್ತಮ.

ಜ್ಞಾನ, ವಿಶ್ವಾಸ, ಚಾರಿತ್ರ್ಯ, ದೇವಭಯ, ವ್ಯವಹಾರ ಚತುರತೆ ಮುಂತಾದ ವಿಷಯಗಳಲ್ಲಿ ಸಾಮಾನ್ಯವಾಗಿ ಇತರ ನಮಾಝಿಗಳಿಗಿಂತ ಶ್ರೇಷ್ಠನಾಗಿರುವಾತನನ್ನೇ ನಮಾಝ್‌ನಲ್ಲಿ ಇಮಾಮ್ ಆಗಿ ನೇಮಿಸಬೇಕು.

ಇಮಾಮ್ ಆಗಿರುವಾತನು ತನ್ನ ಮುಕ್ತದೀಗಳ ಅನಾರೋಗ್ಯ, ದೌರ್ಬಲ್ಯ, ಅಗತ್ಯ ಇತ್ಯಾದಿಗಳನ್ನು ಗಮನದಲ್ಲಿಟ್ಟು, ಮಧ್ಯಮ ತರದ ನಮಾಝ್ ನಿರ್ವಹಿಸಬೇಕು. (ನಮಾಝನ್ನು ವಿಪರೀತವಾಗಿ ದೀರ್ಘಗೊಳಿಸಬಾರದು.)

ಜುಮಾ ನಮಾಝ್

ಜುಮಾ ಅಥವಾ ಶುಕ್ರವಾರ ಮಧ್ಯಾಹ್ನದ ಎರಡು ರಕಅತ್ ನಮಾಝ್ ವಯಸ್ಸಿಗೆ ಬಂದ, ಸ್ವತಂತ್ರರಾದ, ಬುದ್ಧಿ ಸ್ಥಿಮಿತವಿರುವ, ಆರೋಗ್ಯವಂತರಾದ ಮತ್ತು ಪ್ರಯಾಣದಲ್ಲಿಲ್ಲದ ಎಲ್ಲ ಮುಸ್ಲಿಮ್ ಪುರುಷರ ಮೇಲೆ ಕಡ್ಡಾಯವಾಗಿದೆ. ಜುಮಾ ನಮಾಝನ್ನು ಸಾಧ್ಯವಾದಷ್ಟು ಕೇಂದ್ರ ಸ್ಥಳದಲ್ಲಿ ನಿರ್ವಹಿಸಬೇಕು. ತೀರಾ ಕಡಿಮೆ ಜನ ಸೇರುವ, ತೀರಾ ಪುಟ್ಟ ಗ್ರಾಮದಲ್ಲಿ ನಿರ್ವಹಿಸಬಾರದು. ಝುಹರ್ ನಮಾಝ್‌ನ ಕಾಲಮಿತಿಯೊಳಗೇ ಜುಮಾ ನಮಾಝನ್ನೂ ನಿರ್ವಹಿಸಬೇಕು. ನಮಾಝ್‌ಗೆ ಮುಂಚೆ ಖುತ್ಬಾ ಓದಬೇಕು. ಈ ನಮಾಝನ್ನು ಸಾಮೂಹಿಕವಾಗಿ ನಿರ್ವಹಿಸಬೇಕು ಮತ್ತು ಇದರಲ್ಲಿ ಪಾಲ್ಗೊಳ್ಳಲು ಎಲ್ಲ ಮುಸ್ಲಿಮರಿಗೆ ಮುಕ್ತ ಅನುಮತಿ ಇರಬೇಕು.

ವಿತ್ರ್ ನಮಾಝ್

ವಿತ್ರ್ ನಮಾಝ್ 'ವಾಜಿಬ್' ಆಗಿದೆ. ಅಂದರೆ ಇದರ ಸ್ಥಾನವು ಕಡ್ಡಾಯ ನಮಾಝ್‌ಗಳ ಹತ್ತಿರವೇ ಇದೆ. ಇದು ತಪ್ಪಿ ಹೋದರೆ ಆ ಬಳಿಕ ಕಝಾ ನಿರ್ವಹಿಸಬೇಕು. ಸೂಕ್ತ ಕಾರಣವಿಲ್ಲದೆ ಈ ನಮಾಝನ್ನು ತ್ಯಜಿಸುವುದು ಪಾಪವಾಗಿದೆ.

ವಿತ್ರ್ ನಮಾಝ್‌ನಲ್ಲಿ ಮೂರು ರಕಅತ್‌ಗಳಿವೆ. ಇದರ ಎರಡನೆಯ ರಕಅತ್‌ನಲ್ಲಿ (ಮಗ್ರಿಬ್ ನಮಾಝಿನಂತೆ) ಅತ್ತಹಿಯ್ಯಾತ್ ಓದಿದ ಬಳಿಕ ಎದ್ದು ನಿಂತು ಮೂರನೇ ರಕಅತ್‌ಗೆ ನಿಲ್ಲಬೇಕು. ಮೂರನೆಯ ರಕಅತ್‌ನಲ್ಲಿ ಸೂರಃ ಫಾತಿಹಾ ಮತ್ತು ಬೇರೊಂದು ಸೂರಃ ಓದಿದ ಬಳಿಕ 'ಅಲ್ಲಾಹು ಅಕ್ಬರ್' ಎನ್ನುತ್ತಾ ಕಿವಿಯ ತನಕ ಕೈಯೆತ್ತಿ ಆ ಬಳಿಕ ಕೈಕಟ್ಟಿಕೊಂಡು ಕುನೂತ್ ಓದಬೇಕು. ಆ ಬಳಿಕ ರುಕೂಅ್ ಮಾಡಬೇಕು. ಅನಂತರ ಇತರ ನಮಾಝ್‌ಗಳಂತೆಯೇ ನಮಾಝನ್ನು ಪೂರ್ಣಗೊಳಿಸಬೇಕು.

ಇಮಾಮ್ ಆಗಲಿ ಮುಕ್ತದೀ ಆಗಲಿ ಅಥವಾ ಒಬ್ಬಂಟಿಯಾಗಿ ನಮಾಝ್ ನಿರ್ವಹಿಸುವವನೇ ಆಗಲಿ, ಎಲ್ಲರೂ ಕುನೂತನ್ನು ಮೌನವಾಗಿಯೇ ಓದಬೇಕು.

ಕುನೂತ್ ಕಂಠಪಾಠ ಇಲ್ಲದವರು ಬೇರೆ ಯಾವುದಾದರೂ ದುಆ ಓದಬಹುದು.

ಕುನೂತ್

ಕುನೂತ್‌ನ ಪದಗಳು ಹೀಗಿವೆ.

اَللّٰهُمَّ اِنَّا نَسْتَعِينُكَ وَنَسْتَغْفِرُكَ وَنُؤْمِنُ بِكَ وَنَتَوَكَّلُ عَلَيْكَ وَنُثْنِى عَلَيْكَ الْخَيْرَ وَنَشْكُرُكَ وَلَا نَكْفُرُكَ وَنَخْلَعُ وَنَتْرُكُ مَنْ يَّفْجُرُكَ، اَللّٰهُمَّ اِيَّاكَ نَعْبُدُ وَلَكَ نُصَلِّى وَنَسْجُدُ وَاِلَيْكَ نَسْعٰى وَنَحْفِدُ وَنَرْجُو رَحْمَتَكَ وَنَخْشَى عَذَابَكَ اِنَّ عَذَابَكَ بِالْكُفَّارِ مُلْحِقٌ

"ಅಲ್ಲಾಹುಮ್ಮ ಇನ್ನಾ ನಸ್ತಈನುಕ ವನಸ್ತಗ್ಫಿರುಕ ವನುಅ್‌ಮಿನುಬಿಕ ವನತವಕ್ಕಲು ಅಲೈಕ ವನುಸ್ನೀ ಅಲೈಕಲ್ ಖೈರ ವನಶ್‌ಕುರುಕ ವಲಾ ನಕ್ಫುರುಕ ವನಖ್‌ಲವು ವನತ್ರುಕು ಮನ್ ಯಫ್‌ಜುರುಕ ಅಲ್ಲಾಹುಮ್ಮ ಇಯ್ಯಾಕ ನಅ್‌ಬುದು ವಲಕ ನುಸಲ್ಲೀ ವನಸ್‌ಜುದು ವ ಇಲೈಕ ನಸ್‌ಆ ವನಹ್‌ಫಿದು ವನರ್‌ಜೂರಹ್ಮತಕ ವನಖ್‌ಶಾ ಅದಾಬಕ ಇನ್ನ ಅದಾಬಕ ಬಿಲ್ ಕುಫ್ಫಾರಿ ಮುಲ್‌ಹಿಕ್."

ಓ ಅಲ್ಲಾಹ್! ನಾವು ನಿನ್ನಿಂದಲೇ ಸಹಾಯ ಬೇಡುತ್ತೇವೆ. ನಿನ್ನಿಂದಲೇ ಕ್ಷಮೆ ಯಾಚಿಸುತ್ತೇವೆ. ನಿನ್ನ ಮೇಲೆ ವಿಶ್ವಾಸವಿರಿಸುತ್ತೇವೆ. ನಿನ್ನ ಮೇಲೆ ಭರವಸೆ ಇಡುತ್ತೇವೆ. ನಿನ್ನನ್ನು ಉತ್ತಮವಾಗಿ ಪ್ರಶಂಸಿಸುತ್ತೇವೆ. ನಿನಗೆ ಕೃತಜ್ಞತೆ ಸಲ್ಲಿಸುತ್ತೇವೆ. ಕೃತಘ್ನತೆ ತೋರುವುದಿಲ್ಲ. ಕೃತಘ್ನತೆಯ ನೀತಿಯಿಂದ ಸಂಪೂರ್ಣ ದೂರವಿರುತ್ತೇವೆ. ನಿನ್ನ ಆಜ್ಞೆಗಳನ್ನು ಉಲ್ಲಂಘಿಸುವವರೊಂದಿಗೆ ನಾವು ಸಂಬಂಧವಿಟ್ಟುಕೊಳ್ಳುವುದಿಲ್ಲ. ಓ ಅಲ್ಲಾಹ್! ನಾವು ನಿನ್ನನ್ನೇ ಆರಾಧಿಸುತ್ತೇವೆ. ನಿನಗಾಗಿಯೇ ನಮಾಝ್ ನಿರ್ವಹಿಸುತ್ತೇವೆ. ನಿನಗೆ ಮಾತ್ರ ಸಾಷ್ಟಾಂಗವೆರಗುತ್ತೇವೆ. ನಿನ್ನ ಕಡೆಗೇ ಧಾವಿಸುತ್ತೇವೆ ಮತ್ತು ನಿನ್ನ ಆಜ್ಞೆ ಪಾಲಿಸಲು ಸದಾಸನ್ನದ್ಧರಾಗಿರುತ್ತೇವೆ. ನಿನ್ನ ಅನುಗ್ರಹವನ್ನು ನಿರೀಕ್ಷಿಸುತ್ತೇವೆ, ನಿನ್ನ ಶಿಕ್ಷೆಗೆ ಅಂಜುತ್ತೇವೆ. ನಿಸ್ಸಂದೇಹವಾಗಿ ನಿನ್ನ ಶಿಕ್ಷೆಯು ಸತ್ಯಧಿಕ್ಕಾರಿಗಳಿಗೆ ಸಿಕ್ಕಿಯೇ ತೀರುವುದು.

☐

ಸುನ್ನತ್ ಮತ್ತು ನಫಿಲ್ ನಮಾಝ್‌ಗಳು

ಕೆಲವು ನಮಾಝ್‌ಗಳನ್ನು 'ಸುನ್ನತೆ ಮುಅಕ್ಕದ' ಅಥವಾ ಬಹಳ ಮಹತ್ವದ ಸುನ್ನತ್ ನಮಾಝ್‌ಗಳೆಂದು ಪರಿಗಣಿಸಲಾಗುತ್ತದೆ. ಅಂತಹ ನಮಾಝ್‌ಗಳ ವಿವರ ಹೀಗಿದೆ:

- ✦ ಫಜ್ರ್‌ನ ಕಡ್ಡಾಯ ನಮಾಝ್‌ಗಿಂತ ಮುಂಚೆ ಎರಡು ರಕಅತ್‌ಗಳು.
- ✦ ಝುಹರ್ ಮತ್ತು ಜುಮಾದ ಕಡ್ಡಾಯ ನಮಾಝ್‌ಗಳಿಗಿಂತ ಮುಂಚೆ ನಾಲ್ಕು ರಕಅತ್‌ಗಳು.
- ✦ ಝುಹರ್‌ನ ಕಡ್ಡಾಯ ನಮಾಝ್‌ನ ಬಳಿಕ ಎರಡು ರಕಅತ್‌ಗಳು.
- ✦ ಜುಮಾದ ಕಡ್ಡಾಯ ನಮಾಝ್‌ನ ಬಳಿಕ ನಾಲ್ಕು ರಕಅತ್‌ಗಳು.
- ✦ ಮಗ್ರಿಬ್‌ನ ಕಡ್ಡಾಯ ನಮಾಝ್‌ನ ಬಳಿಕ ಎರಡು ರಕಅತ್‌ಗಳು.
- ✦ ಇಶಾದ ಕಡ್ಡಾಯ ನಮಾಝ್‌ನ ಬಳಿಕ ಎರಡು ರಕಅತ್‌ಗಳು.
- ✦ ರಮಝಾನ್ ತಿಂಗಳಲ್ಲಿ 20 ರಕಅತ್ ತರಾವೀಹ್ ನಮಾಝ್.

ಮುಅಕ್ಕದ ಅಲ್ಲದ ಕೆಲವು ಸುನ್ನತ್ ನಮಾಝ್‌ಗಳ ವಿವರ ಹೀಗಿದೆ:

- ✦ ಅಸರ್‌ನ ಕಡ್ಡಾಯ ನಮಾಝ್‌ಗಿಂತ ಮುಂಚೆ ನಾಲ್ಕು ರಕಅತ್‌ಗಳು.
- ✦ ಮಗ್ರಿಬ್‌ನಲ್ಲಿ 'ಸುನ್ನತೆ ಮುಅಕ್ಕದ'ದ ಬಳಿಕ ಆರು ರಕಅತ್‌ಗಳು.
- ✦ ಇಶಾದಲ್ಲಿ 'ಸುನ್ನತೆ ಮುಅಕ್ಕದ' ಮುಗಿದ ಬಳಿಕ ಎರಡು ರಕಅತ್‌ಗಳು.
- ✦ ಜುಮಾದ ನಂತರದ 'ಸುನ್ನತೆ ಮುಅಕ್ಕದ' ಮುಗಿದ ಬಳಿಕ ಎರಡು ರಕಅತ್‌ಗಳು.
- ✦ 'ತಹಿಯ್ಯತುಲ್ ವುಝೂ' (ಅರ್ಥಾತ್- ವುಝೂ ಮಾಡಿ ಆದ ನಂತರ ಸಲ್ಲಿಸುವ ಕಾಣಿಕೆ) ಎಂಬ ಎರಡು ರಕಅತ್‌ಗಳು.
- ✦ 'ತಹಿಯ್ಯತುಲ್ ಮಸ್ಜಿದ್'(ಅರ್ಥಾತ್- ಮಸೀದಿಗೆ ಪ್ರವೇಶಿಸಿದ ಕೂಡಲೇ ಸಲ್ಲಿಸುವ ಕಾಣಿಕೆ) ಎಂಬ ಎರಡು ರಕಅತ್‌ಗಳು.
- ✦ 'ಸಲಾತುದ್ದುಹಾ' (ಅರ್ಥಾತ್- ಸೂರ್ಯೋದಯದ ಬಳಿಕ)ದ ನಾಲ್ಕು ಅಥವಾ ಎಂಟು ರಕಅತ್‌ಗಳು.
- ✦ 'ತಹಜ್ಜುದ್'(ರಾತ್ರಿ ನಿದ್ದೆಯಿಂದೆದ್ದು ಮಾಡುವ) ನಮಾಝಿನ ನಾಲ್ಕು, ಆರು ಅಥವಾ ಎಂಟು ರಕಅತ್‌ಗಳು.
- ✦ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದ ವೇಳೆ ನಿರ್ವಹಿಸುವ ಎರಡು ರಕಅತ್‌ಗಳು.
- ✦ 'ಇಸ್ತಿಖಾರಃ ನಮಾಝ್', 'ತೌಬಾ ನಮಾಝ್', 'ಹಾಜತ್ ನಮಾಝ್' ಇತ್ಯಾದಿ.

ಹೆಚ್ಚಿನ ಸುನ್ನತ್ ಮತ್ತು ನಫಿಲ್ ನಮಾಝ್‌ಗಳನ್ನು ಮನೆಯಲ್ಲೇ ನಿರ್ವಹಿಸುವುದು ಒಳ್ಳೆಯದು. ಆದರೆ ತರಾವೀಹ್, ತಹಿಯ್ಯತುಲ್ ಮಸ್ಜಿದ್, ಸೂರ್ಯಗ್ರಹಣದ ನಮಾಝ್ ಮುಂತಾದ ಕೆಲವು ನಮಾಝ್‌ಗಳನ್ನು ಮಸೀದಿಯಲ್ಲಿ ನಿರ್ವಹಿಸಬೇಕು.

ತರಾವೀಹ್

ರಮಝಾನ್ ತಿಂಗಳಲ್ಲಿ ಇಶಾ ನಮಾಝ್‌ನ ಬಳಿಕ, ವಿತ್ರ್‌ಗೆ ಮುಂಚೆ ತರಾವೀಹ್ ನಮಾಝ್ ನಿರ್ವಹಿಸುವುದು 'ಸುನ್ನತೆ ಮುಅಕ್ಕದ' ಆಗಿದೆ. ಅದನ್ನು ಜಮಾಅತ್‌ನೊಂದಿಗೆ ನಿರ್ವಹಿಸುವುದು ಸಾಮೂಹಿಕ ಸುನ್ನತ್ ಆಗಿದೆ. ತರಾವೀಹ್‌ನಲ್ಲಿ ಎರಡೆರಡು ರಕಅತ್‌ಗಳಂತೆ ಒಟ್ಟು ಇಪ್ಪತ್ತು ರಕಅತ್ ನಮಾಝ್ ನಿರ್ವಹಿಸಬೇಕು. ಪ್ರತಿ ನಾಲ್ಕು ರಕಅತ್‌ಗಳ ಬಳಿಕ ಸ್ವಲ್ಪ ಹೊತ್ತು ವಿಶ್ರಮಿಸಬೇಕು. ಹೀಗೆ ವಿಶ್ರಮಿಸುವಾಗ ಮೌನವಾಗಿಯೂ ಇರಬಹುದು ಅಥವಾ ಏನಾದರೂ ದಿಕ್ರ್, ತಸ್ಬೀಹ್‌ಗಳನ್ನು ಪಠಿಸಬಹುದು.

ಈದ್ ನಮಾಝ್

ಈದುಲ್ ಫಿತ್ರ್ ಮತ್ತು ಈದುಲ್ ಅಝ್‌ಹಾದ ದಿನ ವಿಶೇಷ ಈದ್ ನಮಾಝ್‌ಗಳನ್ನು ನಿರ್ವಹಿಸುವುದು ವಾಜಿಬ್ ಆಗಿದೆ. ಜುಮಾ ನಮಾಝ್‌ಗೆ ಇರುವ ಶರತ್ತುಗಳೆಲ್ಲಾ ಈದ್ ನಮಾಝ್‌ಗೂ ಇದೆ. ಆದರೆ ಈದ್ ನಮಾಝ್‌ನಲ್ಲಿ ಖುತ್ಬಾ ಶರತ್ತಾಗಲೀ ಕಡ್ಡಾಯವಾಗಲೀ ಅಲ್ಲ. ಅದು ಸುನ್ನತ್ ಆಗಿದೆ.

ಈದ್ ನಮಾಝ್‌ಗಳಲ್ಲಿ ಆರು ಹೆಚ್ಚುವರಿ ತಕ್ಬೀರ್‌ಗಳು ವಾಜಿಬ್ ಆಗಿದೆ. ನಿಯ್ಯತ್ ಉಚ್ಚರಿಸಿ, 'ಅಲ್ಲಾಹು ಅಕ್ಬರ್' ಎಂದು ತಕ್ಬೀರೆ ತಹ್ರೀಮಾ ಹೇಳಿ ಕೈಕಟ್ಟಿಕೊಂಡು 'ಸನಾ' ಓದಬೇಕು. ಆ ಬಳಿಕ 'ಅಲ್ಲಾಹು ಅಕ್ಬರ್' ಎಂದು ಕೈಯೆತ್ತಿ, ಕಟ್ಟದೆ ಕೆಳಗೆ ಬಿಡಬೇಕು. ಎರಡನೆಯ ಸಲ ಪುನಃ ಕೈಯೆತ್ತಿ ತಕ್ಬೀರ್ ಹೇಳಿ ಹಾಗೆಯೇ ಮಾಡಬೇಕು. ಮೂರನೆಯ ಸಲ ತಕ್ಬೀರ್ ಹೇಳಿ ಕೈಕಟ್ಟಿಕೊಳ್ಳಬೇಕು. ಹೀಗೆ ಮೂರು ಹೆಚ್ಚುವರಿ ತಕ್ಬೀರ್‌ಗಳನ್ನು ಹೇಳುವಾಗ ಪ್ರತಿಯೊಂದು ತಕ್ಬೀರ್‌ನ ಬಳಿಕ, ಮೂರು ಬಾರಿ "ಸುಬ್‌ಹಾನಲ್ಲಾಹ್" ಎಂದು ಹೇಳುವಷ್ಟು ಅಂತರವಿರಬೇಕು. ಮೂರನೆಯ ತಕ್ಬೀರ್‌ನ ಬಳಿಕ ಅವೂದು... ಬಿಸ್ಮಿ... ಓದಿ ನಮಾಝ್ ಮುಂದುವರಿಸಬೇಕು. ಮೊದಲ ರಕಅತ್ ಮುಗಿಸಿ ಎರಡನೆಯ ರಕಅತ್‌ನಲ್ಲಿ ಫಾತಿಹಾ ಮತ್ತು ಬೇರೆ ಸೂರಃ ಓದಿದ ಬಳಿಕ ನಿಂತಿರುವ ಸ್ಥಿತಿಯಲ್ಲೇ ರುಕೂಅ್ ಮಾಡುವ ಬದಲು 'ಅಲ್ಲಾಹು ಅಕ್ಬರ್' ಎಂದು ಹೆಚ್ಚುವರಿ ತಕ್ಬೀರ್ ಹೇಳುತ್ತಾ ಕೈ ಎತ್ತಿ ಕೈಗಳನ್ನು ಕೆಳಗೆ ಬಿಡಬೇಕು. ಮೂರು ಸಲ ಹೀಗೆಯೇ ಮಾಡಿದ ಬಳಿಕ ನಾಲ್ಕನೆಯ ಸಲ 'ಅಲ್ಲಾಹು ಅಕ್ಬರ್' ಎನ್ನುತ್ತಾ ಬಾಗಿ ರುಕೂಅ್ ಮಾಡಬೇಕು. ಆ ಬಳಿಕ ಮಾಮೂಲಿನಂತೆ ನಮಾಝ್ ಪೂರ್ತಿಗೊಳಿಸಬೇಕು.

ಈದ್ ನಮಾಝ್‌ನ ಸಮಯವು ಸೂರ್ಯನ ಬೆಳಕು ಸರಿಯಾಗಿ ಹಬ್ಬಿ, ಬಿಸಿಲು ತೀವ್ರವಾಗ ತೊಡಗುವ ಸಮಯದಿಂದ ಆರಂಭವಾಗಿ ನಡು ಮಧ್ಯಾಹ್ನದ ವೇಳೆ ಪೂರ್ಣವಾಗುತ್ತದೆ. ಆದರೆ ಈದ್ ನಮಾಝನ್ನು ಆದಷ್ಟು ಬೇಗ ನಿರ್ವಹಿಸುವುದು ಉತ್ತಮ. ಈದುಲ್ ಅಝ್‌ಹಾದ ನಮಾಝನ್ನು ಇನ್ನೂ ಬೇಗ ನಿರ್ವಹಿಸಬೇಕು.

ಈದ್ ನಮಾಝ್‌ಗೆ ಅದಾನ್ ಅಥವಾ ಇಕಾಮತ್ ಹೇಳಬೇಕಾಗಿಲ್ಲ. ಸೂರಃ ಫಾತಿಹಾ ಮತ್ತು ಬೇರೆ ಸೂರಃವನ್ನು ಜೋರಾಗಿ ಪಠಿಸುವುದು ವಾಜಿಬ್ ಆಗಿದೆ.

ಈದ್ ನಮಾಝ್‌ನ ಖುತ್ಬಾವನ್ನು ನಮಾಝ್‌ನ ಬಳಿಕ ಓದುವುದು ಸುನ್ನತ್ ಆಗಿದೆ. ಖುತ್ಬಾ ಕೇಳುವುದು ವಾಜಿಬ್ ಆಗಿದೆ.

ದುಲ್‌ಹಜ್ಜ್ ತಿಂಗಳ 9ನೆಯ ದಿನ ಫಜ್ರ್ ನಮಾಝ್‌ನಿಂದ 13ನೆಯ ದಿನದ ಅಸರ್ ನಮಾಝ್ ತನಕ ಪ್ರತಿಯೊಂದು ನಮಾಝ್‌ನ ಬಳಿಕ ಈ ಕೆಳಗಿನಂತೆ ಜೋರಾದ ಧ್ವನಿಯಲ್ಲಿ ತಕ್ಬೀರ್ ಹೇಳಬೇಕಾದುದು ಪುರುಷರಿಗೆ ವಾಜಿಬ್ ಆಗಿದೆ:

اَللّٰهُ اَكْبَرُ اَللّٰهُ اَكْبَرُ لَا اِلٰهَ اِلَّا اللّٰهُ وَاللّٰهُ اَكْبَرُ اَللّٰهُ اَكْبَرُ وَلِلّٰهِ الْحَمْدُ

"ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಲಾಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ವ ಲಿಲ್ಲಾಹಿಲ್ ಹಮ್ದ್."

(ಅಲ್ಲಾಹನು ಅತ್ಯಂತ ಮಹಾನನು. ಅಲ್ಲಾಹನು ಅತ್ಯಂತ ಮಹಾನನು. ಅಲ್ಲಾಹನ ಹೊರತು ಬೇರೆ ಆರಾಧ್ಯರಿಲ್ಲ. ಅಲ್ಲಾಹನು ಅತ್ಯಂತ ಮಹಾನನು. ಸರ್ವಸ್ತುತಿಗಳು ಅಲ್ಲಾಹನಿಗೇ ಮೀಸಲು.)

ಮಹಿಳೆಯರು ಇದನ್ನು ಮೆಲುದನಿಯಲ್ಲಿ ಹೇಳಬೇಕು.

ಗ್ರಹಣದ ನಮಾಝ್

ಸೂರ್ಯಗ್ರಹಣಕ್ಕೆ 'ಕಸೂಫ್' ಎಂದೂ ಚಂದ್ರಗ್ರಹಣಕ್ಕೆ 'ಖಸೂಫ್' ಎಂದೂ ಹೇಳುತ್ತಾರೆ. ಸೂರ್ಯ ಅಥವಾ ಚಂದ್ರಗ್ರಹಣದ ವೇಳೆ ಎರಡು ರಕಅತ್ ನಮಾಝ್ ನಿರ್ವಹಿಸುವುದು ಸುನ್ನತ್ ಆಗಿದೆ. ಸೂರ್ಯಗ್ರಹಣದ ವೇಳೆ ನಮಾಝನ್ನು ಸಾಮೂಹಿಕವಾಗಿ ನಿರ್ವಹಿಸಬೇಕು. ಫಾತಿಹಾ ಮತ್ತು ಬೇರೆ ಅಧ್ಯಾಯವನ್ನು ಜೋರಾಗಿ ಪಠಿಸಬೇಕು. ಚಂದ್ರಗ್ರಹಣದ ವೇಳೆ ಒಂಟಿಯಾಗಿ ನಮಾಝ್ ನಿರ್ವಹಿಸಬೇಕು.

ತಹಜ್ಜುದ್ ನಮಾಝ್

ತಹಜ್ಜುದ್ ನಮಾಝ್ ಅತ್ಯಂತ ಪುಣ್ಯದಾಯಕ ಸುನ್ನತ್ ಆಗಿದೆ. ರಾತ್ರಿ ನಿದ್ದೆಯಿಂದೆದ್ದು ಈ ನಮಾಝನ್ನು ನಿರ್ವಹಿಸಬೇಕು. ಫಜ್ರ್ ನಮಾಝ್‌ನ ಸಮಯ ಆರಂಭವಾಗುವ ಮುನ್ನ ಈ ನಮಾಝನ್ನು ನಿರ್ವಹಿಸಬೇಕು. ಕನಿಷ್ಠಪಕ್ಷ ಎರಡು ರಕಅತ್ ಅಥವಾ ಎರಡೆರಡು ರಕಅತ್‌ಗಳಂತೆ ಹೆಚ್ಚೆಂದರೆ ಎಂಟು ರಕಅತ್ ನಮಾಝ್ ನಿರ್ವಹಿಸಬೇಕು.

ಸಜ್ದಾಯೆ ಸಹೂ

ಮರೆವಿನಿಂದಾಗಿ ನಮಾಝ್‌ನಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಅದಕ್ಕೆ ಪರಿಹಾರವಾಗಿ ನಮಾಝ್‌ನ ಕೊನೆಯಲ್ಲಿ ಮಾಡುವ ವಿಶೇಷ ಸುಜೂದ್‌ಗಳಿಗೆ 'ಸಜ್ದಾಯೆ ಸಹೂ' ಎಂದು ಹೆಸರು.

ಈ ಕೆಳಗಿನ ಯಾವುದೇ ತಪ್ಪು ಸಂಭವಿಸಿದರೆ 'ಸಜ್ದಾಯೆ ಸಹೂ' ಮಾಡುವುದು ವಾಜಿಬ್ ಆಗಿದೆ:

1. ನಮಾಝ್‌ನಲ್ಲಿ ಕಡ್ಡಾಯವಾಗಿರುವ ಯಾವುದಾದರೂ ಕರ್ಮವನ್ನು ಅನಗತ್ಯವಾಗಿ ಪುನರಾವರ್ತಿಸಿದರೆ, ಯಾವುದಾದರೂ ಕರ್ಮವನ್ನು ಮಾಡುವಾಗ ವಿಳಂಬವಾದರೆ ಅಥವಾ ಯಾವುದಾದರೂ ಕರ್ಮವನ್ನು ಸಮಯಕ್ಕಿಂತ ಮೊದಲು ಮಾಡಿದರೆ. (ಉದಾ: ಒಂದು ರಕಅತ್‌ನಲ್ಲಿ ಎರಡು ಸಲ ರುಕೂಅ್ ಮಾಡಿದರೆ, ಕಿರಾಅತ್ ಮಾಡಿದ ಬಳಿಕ ಸುಮ್ಮನೆ ನಿಂತು ಬಹಳ ವಿಳಂಬಿಸಿ ರುಕೂಅ್ ಮಾಡಿದರೆ, ರುಕೂಅ್ ಮಾಡುವ ಮೊದಲೇ ಸುಜೂದ್ ಮಾಡಿದರೆ)

2. ನಮಾಝ್‌ನಲ್ಲಿ ವಾಜಿಬ್ ಆಗಿರುವ ಯಾವುದಾದರೂ ಕರ್ಮವು ಮರೆವಿನಿಂದಾಗಿ ಬಿಟ್ಟು ಹೋದರೆ. (ಉದಾ: ಫಾತಿಹಾದ ಬಳಿಕ ಬೇರೆ ಸೂರಃ ಓದಲು ಮರೆತರೆ) ಅಥವಾ ವಾಜಿಬ್ ಕರ್ಮ ನಿರ್ವಹಿಸಲು ವಿಳಂಬವಾದರೆ (ಉದಾ: ಫಾತಿಹಾದ ಬಳಿಕ ಬೇರೆ ಸೂರಃ ಓದಲು ಅಸಾಮಾನ್ಯ ವಿಳಂಬವಾದರೆ)

3. ನಮಾಝ್‌ನಲ್ಲಿ ವಾಜಿಬ್ ಆಗಿರುವ ಯಾವುದಾದರೂ ಅಂಶದ ಸ್ವರೂಪ ಬದಲಾದರೆ. (ಉದಾ: ಯಾವ ನಮಾಝ್‌ಗಳಲ್ಲಿ ಮೌನವಾಗಿ ಕಿರಾಅತ್ ಓದುವುದು ವಾಜಿಬ್ ಆಗಿದೆಯೋ ಅವುಗಳಲ್ಲಿ ಜೋರಾದ ಧ್ವನಿಯಲ್ಲಿ ಕಿರಾಅತ್ ಓದಿದರೆ ಅಥವಾ ಜೋರಾಗಿ ಕಿರಾಅತ್ ಓದಬೇಕಾದ ನಮಾಝ್‌ಗಳಲ್ಲಿ ಮೌನವಾಗಿ ಕಿರಾಅತ್ ಓದಿದರೆ)

ನಮಾಝ್‌ನಲ್ಲಿ ಮೇಲೆ ಪ್ರಸ್ತಾಪಿಸಿದಂತಹ ತಪ್ಪುಗಳು ಒಂದಕ್ಕಿಂತ ಹೆಚ್ಚು ಬಾರಿ ಸಂಭವಿಸಿದರೆ ಒಂದು ಸಲ ಮಾತ್ರ 'ಸಜ್ದಾಯೆ ಸಹೂ' ಅರ್ಥಾತ್ 'ಮರೆವಿನ ಸುಜೂದ್'ಗಳನ್ನು ಮಾಡಬೇಕು. ಇಮಾಮ್‌ನಿಂದ ಮೇಲೆ ಪ್ರಸ್ತಾಪಿಸಿದ ತಪ್ಪು ಸಂಭವಿಸಿದರೆ ಇಮಾಮ್ ಮತ್ತು ಮುಕ್ತದೀಗಳೆಲ್ಲರೂ 'ಸಜ್ದಾಯೆ ಸಹೂ' ಮಾಡಬೇಕು. ಕೇವಲ ಮುಕ್ತದೀಗಳಿಂದ ಮಾತ್ರ ತಪ್ಪು ಸಂಭವಿಸಿದರೆ ಯಾರೂ ಸಜ್ದಾಯೆ ಸಹೂ ಮಾಡಬೇಕಾಗಿಲ್ಲ.

ಆದರೆ ನಮಾಝ್‌ನೊಳಗಿನ ಯಾವುದಾದರೂ ಕಡ್ಡಾಯ ಕರ್ಮವು ಮರೆವಿನಿಂದಾಗಿ ಅಥವಾ ಉದ್ದೇಶಪೂರ್ವಕವಾಗಿ ಬಿಟ್ಟುಹೋದರೆ ಈ ತಪ್ಪಿಗೆ 'ಸಜ್ದಾಯೆ ಸಹೂ' ಪರಿಹಾರವಲ್ಲ. ಹಾಗೆ ಆದಾಗ ಆ ನಮಾಝನ್ನು ಪುನಃ ನೆರವೇರಿಸಬೇಕು.

ಸಜ್ದಾಯೆ ಸಹೂ ಮಾಡುವ ವಿಧಾನ

ಕೊನೆಯ ರಕಅತ್‌ನಲ್ಲಿ ಅತ್ತಹಿಯ್ಯಾತ್ ಮತ್ತು ತಶಹ್ಹುದ್ ಮುಗಿದ ಬಳಿಕ ಬಲಭಾಗಕ್ಕೆ ತಿರುಗಿ ಒಂದು ಸಲ ಸಲಾಮ್ ಹೇಳಿ ಸುಜೂದ್ ಮಾಡಬೇಕು. ಸುಜೂದ್‌ನಿಂದ ಎದ್ದು ಸಮಾಧಾನದಿಂದ ಇನ್ನೊಂದು ಸುಜೂದ್ ಮಾಡಬೇಕು. ತರುವಾಯ ಅತ್ತಹಿಯ್ಯಾತ್, ತಶಹ್ಹುದ್, ದರೂದ್ ಮತ್ತು ದುಆ ಓದಿ ನಿಯಮ ಪ್ರಕಾರ ಎರಡು ಸಲಾಮ್ ಹೇಳಿ ನಮಾಝ್ ಮುಗಿಸಬೇಕು.

ಸಜ್ದಾಯೆ ತಿಲಾವತ್

ಪವಿತ್ರ ಕುರ್‌ಆನಿನ 14 ನಿರ್ದಿಷ್ಟ ಕಡೆಗಳಲ್ಲಿ, ಅಲ್ಲಿರುವ ಸೂಕ್ತವನ್ನು ಓದುವಾಗ ಅಥವಾ ಕೇಳುವಾಗ ಸುಜೂದ್ ಮಾಡಬೇಕಾದುದು ವಾಜಿಬ್ ಆಗಿದೆ. ಇದನ್ನು 'ಸಜ್ದಾಯೆ ತಿಲಾವತ್' ಎನ್ನುತ್ತಾರೆ.

ವಿಧಾನ: ವುಝೂ ಮಾಡಿ, ಕಿಬ್ಲಾದ ಕಡೆಗೆ ಮುಖಮಾಡಿ ನಿಂತು 'ಸಜ್ದಾಯೆ ತಿಲಾವತ್'ನ ನಿಯ್ಯತ್ ಮಾಡಿ 'ಅಲ್ಲಾಹು ಅಕ್ಬರ್' ಎನ್ನುತ್ತಾ ಸುಜೂದ್ ಮಾಡಬೇಕು ಮತ್ತು ಸುಜೂದ್‌ನ ತಸ್ಬೀಹ್ ಓದಿ 'ಅಲ್ಲಾಹು ಅಕ್ಬರ್' ಎನ್ನುತ್ತಾ ಎದ್ದು ನಿಲ್ಲಬೇಕು. ತಶಹ್ಹುದ್ ಓದಲು ಕುಳಿತುಕೊಳ್ಳಬೇಕಾಗಿಲ್ಲ.

ನಮಾಝ್‌ನಲ್ಲಿ ಸುಜೂದ್‌ನ ಸೂಕ್ತವನ್ನು ಪಠಿಸಿದರೆ ತಡಮಾಡದೆ ಆ ಕೂಡಲೇ ಸುಜೂದ್ ಮಾಡಬೇಕಾದುದು ವಾಜಿಬ್ ಆಗಿದೆ. ನಮಾಝ್‌ನ ಹೊರಗೆ ಅಂತಹ ಸೂಕ್ತವನ್ನು ಪಠಿಸಿದರೆ ಅಥವಾ ಕೇಳಿದರೆ ತಕ್ಷಣ ಸುಜೂದ್ ಮಾಡುವುದು ಒಳ್ಳೆಯದು. ಆದರೆ ಯಾವುದಾದರೂ ಕಾರಣದಿಂದ ವಿಳಂಬಿಸಿದರೂ ಪಾಪವಿಲ್ಲ. ವಿನಾಕಾರಣ ವಿಳಂಬಿಸುವುದು ಮಾತ್ರ ಸರಿಯಲ್ಲ.

ಜನಾಝಾ ನಮಾಝ್

ಮೃತ ವ್ಯಕ್ತಿಯ ಪಾಪ ವಿಮೋಚನೆಗಾಗಿ ಪ್ರಾರ್ಥಿಸಲು ನೆರವೇರಿಸುವ ವಿಶೇಷ ನಮಾಝ್‌ಗೆ 'ಜನಾಝಾ ನಮಾಝ್' ಎಂದು ಹೆಸರು. ಇದು ಸಾಮೂಹಿಕ ಕಡ್ಡಾಯ ಕರ್ಮವಾಗಿದೆ. ಇದರಲ್ಲಿ ಸಾಧ್ಯವಾದಷ್ಟು ಹೆಚ್ಚು ಜನ ಸೇರಿದರೆ ಒಳ್ಳೆಯದು. ಆದರೆ ಜನ ಸೇರಲೆಂದು ಕಾದು ನಮಾಝನ್ನು ವಿಳಂಬಿಸಬಾರದು.

ಜನಾಝಾ ನಮಾಝ್‌ನಲ್ಲಿ ಎರಡು ಅಂಶಗಳು ಫರ್ಝ್ ಅಥವಾ ಕಡ್ಡಾಯವಾಗಿವೆ:

1. ನಾಲ್ಕು ಬಾರಿ 'ಅಲ್ಲಾಹು ಅಕ್ಬರ್' ಎನ್ನುವುದು.
2. ನಿಂತು ನಮಾಝ್ ನಿರ್ವಹಿಸುವುದು.

ಬಲವಾದ ಕಾರಣವಿಲ್ಲದೆ, ಕುಳಿತು ನಮಾಝ್ ನಿರ್ವಹಿಸುವುದಾಗಲಿ ವಾಹನದಲ್ಲಿ ನಮಾಝ್ ನಿರ್ವಹಿಸುವುದಾಗಲಿ ಸಲ್ಲದು.

ಜನಾಝಾ ನಮಾಝ್‌ನಲ್ಲಿ ಮೂರು ಅಂಶಗಳು ಸುನ್ನತ್ ಆಗಿವೆ:

1. ಸನಾ ಓದುವುದು.
2. ದರೂದ್ ಓದುವುದು.
3. ಮೃತ ವ್ಯಕ್ತಿಗಾಗಿ ಪ್ರಾರ್ಥಿಸುವುದು.

ಮೃತ ವ್ಯಕ್ತಿಯು ವಯಸ್ಕನಾಗಿದ್ದರೆ, ಈ ರೀತಿ ಪ್ರಾರ್ಥಿಸಬೇಕು:

اَللّٰهُمَّ اغْفِرْ لِحَيِّنَا وَمَيِّتِنَا وَشَاهِدِنَا وَغَائِبِنَا وَصَغِيْرِنَا وَكَبِيْرِنَا ، وَذَكَرِنَا وَاُنْثَانَا -اَللّٰهُمَّ مَنْ اَحْيَيْتَهُ مِنَّا فَاَحْيِهِ عَلَى الْاِسْلَامِ وَمَنْ تَوَفَّيْتَهُ مِنَّا فَتَوَفَّهُ عَلَى الْاِيْمَانِ۔

"ಅಲ್ಲಾಹುಮ್ಮಗ್‌ಫಿರ್ ಲಿಹಯ್ಯಿನಾ ವಮಯ್ಯಿತಿನಾ ವಶಾಹಿದಿನಾ ವಗಾಯಿಬಿನಾ ವಸಗೀರಿನಾ, ವಕಬೀರಿನಾ, ವದಕರಿನಾ ವಉನ್‌ಸಾನಾ. ಅಲ್ಲಾಹುಮ್ಮ ಮನ್ ಅಹ್‌ಯಯ್ಯತಹೂ ಮಿನ್ನಾ ಫಅಹ್‌ಯಿಹೀ ಅಲಲ್ ಇಸ್ಲಾಮಿ ವಮನ್ ತವಫ್ಫೈತಹೂ ಮಿನ್ನಾ ಫತವಫ್ಫಹೂ ಅಲಲ್ ಈಮಾನ್."

(ಓ ಅಲ್ಲಾಹ್! ನಮ್ಮಲ್ಲಿನ ಜೀವಂತ ವ್ಯಕ್ತಿಗಳನ್ನು, ಮೃತ ವ್ಯಕ್ತಿಗಳನ್ನು ನಮ್ಮ ಪೈಕಿ ಹಾಜರಿರುವವರನ್ನು, ಹಾಜರಿಲ್ಲದವರನ್ನು, ನಮ್ಮಲ್ಲಿನ ಕಿರಿಯರನ್ನು, ಹಿರಿಯರನ್ನು, ನಮ್ಮ ಪುರುಷರನ್ನು ಮತ್ತು ಮಹಿಳೆಯರನ್ನು ಕ್ಷಮಿಸು. ಓ ಅಲ್ಲಾಹ್! ನೀನು ನಮ್ಮ ಪೈಕಿ ಯಾರನ್ನು ಜೀವಂತವಾಗಿಡುವೆಯೋ ಅವರನ್ನು ಇಸ್ಲಾಮಿನ ಮಾರ್ಗದಲ್ಲಿ ಜೀವಂತವಾಗಿಡು. ನಮ್ಮ ಪೈಕಿ ಯಾರಿಗೆ ಮರಣ ನೀಡುವೆಯೋ ಅವರಿಗೆ ಈಮಾನಿನ ಸ್ಥಿತಿಯಲ್ಲಿ ಮರಣ ನೀಡು.)

ಮೃತ ವ್ಯಕ್ತಿಯು ಬಾಲಕನಾಗಿದ್ದರೆ ಹೀಗೆ ಪ್ರಾರ್ಥಿಸಬೇಕು:

اَللّٰهُمَّ اجْعَلْهُ لَنَا فَرَطًا وَاجْعَلْهُ لَنَا اَجْرًا وَذُخْرًا وَاجْعَلْهُ لَنَا شَافِعًا وَمُشَفَّعًا

"ಅಲ್ಲಾಹುಮ್ಮಜ್‌ಅಲ್‌ಹು ಲನಾ ಫರತನ್ ವಜ್‌ಅಲ್‌ಹು ಲನಾ ಅಜ್ರನ್ ವಝುಖ್ರನ್ ವಜ್‌ಅಲ್‌ಹು ಲನಾ ಶಾಫಿಅನ್ ವಮುಶಫ್ಫಅ."

ಮೃತ ವ್ಯಕ್ತಿಯು ಬಾಲಕಿಯಾಗಿದ್ದರೆ ಹೀಗೆ ಪ್ರಾರ್ಥಿಸಬೇಕು:

اَللّٰهُمَّ اجْعَلْهَا لَنَا فَرَطًا وَاجْعَلْهَا لَنَا اَجْرًا وَّذُخْرًا وَاجْعَلْهَا لَنَا شَافِعَةً وَّمُشَفَّعَةً

"ಅಲ್ಲಾಹುಮ್ಮಜ್‌ಅಲ್‌ಹಾ ಲನಾ ಫರ್‌ತನ್ ವಜ್‌ಅಲ್‌ಹಾ ಲನಾ ಅಜ್ರನ್ ವಝುಖ್ರನ್ ವಜ್‌ಅಲಹಾ ಲನಾ ಶಾಫಿಅತಂವ ಮುಶಫ್ಫಅತನ್."

(ಓ ಅಲ್ಲಾಹ್! ಈ ಬಾಲಕ/ಬಾಲಕಿಯನ್ನು ನಮ್ಮ ಪಾಪ ವಿಮೋಚನೆಗಾಗಿ ಮುಂದೆ ಹೋಗುವವನಾ(ಳಾ)ಗಿ ಮಾಡು. ಅವನ(ಳ) ಅಗಲಿಕೆಯ ದುಃಖವನ್ನು ನಮ್ಮ ಪಾಲಿಗೆ ಪುಣ್ಯದಾಯಕವಾಗಿ ಹಾಗೂ ಪುಣ್ಯದ ಭಂಡಾರವಾಗಿ ಮಾಡು. ಅವನ(ಳ)ನ್ನು, ಯಾರ ಶಿಫಾರಸು ಖಂಡಿತ ಸ್ವೀಕರಿಸಲ್ಪಡುತ್ತದೋ ಅಂತಹ ಶಿಫಾರಸುದಾರನಾ(ಳಾ)ಗಿ ಮಾಡು.)

ಜನಾಝಾ ನಮಾಝ್‌ನ ವಿಧಾನ: ಇಮಾಮ್, ಮೃತ ಶರೀರದ ಎದೆಯ ಭಾಗದಲ್ಲಿ ನಿಂತುಕೊಳ್ಳಬೇಕು. ಮುಕ್ತದೀಗಳು ಆತನ ಹಿಂದೆ ಮೂರು ಸಾಲುಗಳಲ್ಲಿ ನಿಂತುಕೊಳ್ಳಬೇಕು. ಬಹಳ ಹೆಚ್ಚು ಮಂದಿ ಇದ್ದರೆ ಹೆಚ್ಚು ಸಾಲುಗಳನ್ನು ರಚಿಸ ಬಹುದು. ಆದರೆ ಸಾಲುಗಳು ಬೆಸಸಂಖ್ಯೆಯಲ್ಲಿರಬೇಕು. ಇಮಾಮ್‌ನ ಹೊರತು ಕೇವಲ ಆರು ಮಂದಿ ಇದ್ದರೆ ಅವರು ಕೂಡಾ ಮೂರು ಸಾಲುಗಳಾಗಿ ನಿಲ್ಲಬೇಕು. ಮೊದಲ ಸಾಲಲ್ಲಿ ಮೂರು ಮಂದಿ, ಎರಡನೆಯ ಸಾಲಲ್ಲಿ ಇಬ್ಬರು, ಮೂರನೆಯ ಸಾಲಲ್ಲಿ ಒಬ್ಬ ವ್ಯಕ್ತಿ. ಎಲ್ಲರೂ ನಿಯ್ಯತ್ ಮಾಡಬೇಕು. ಮೊದಲು ಕೈಗಳನ್ನೆತ್ತಿ ತಕ್ಬೀರ್ ಹೇಳಿ ಇತರ ಎಲ್ಲಾ ನಮಾಝ್‌ಗಳಲ್ಲಿ ಕೈಕಟ್ಟುವಂತೆ ಕೈಕಟ್ಟಿ ಕೊಳ್ಳಬೇಕು. ಸನಾ ಓದಬೇಕು. ಆ ಬಳಿಕ ಕೈಯೆತ್ತದೆ ತಕ್ಬೀರ್ ಹೇಳಿ ದರೂದ್(ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದ್...) ಓದಬೇಕು. ಆ ಬಳಿಕ ಮತ್ತೆ ಕೈಯೆತ್ತದೆಯೇ ತಕ್ಬೀರ್ ಹೇಳಿ ಮಯ್ಯತ್‌ಗಾಗಿ ದುಆ ಓದಬೇಕು. ಈ ಎಲ್ಲಾ ಸಂದರ್ಭಗಳಲ್ಲೂ ಕೈಕಟ್ಟಿಕೊಂಡೇ ಇರಬೇಕು. ನಾಲ್ಕನೆಯ ಬಾರಿ ಕೈಯೆತ್ತದೆ ತಕ್ಬೀರ್ ಹೇಳಿ, ಕೈಕಟ್ಟಿಕೊಂಡಿರುವ ಸ್ಥಿತಿಯಲ್ಲೇ ಎರಡೂ ಕಡೆಗೆ ಮುಖ ತಿರುಗಿಸಿ ಸಲಾಮ್ ಹೇಳಿ ನಮಾಝ್ ಮುಗಿಸಬೇಕು.

ಮಯ್ಯತ್ ನಮಾಝ್‌ನಲ್ಲಿ ರುಕೂಅ್ ಮತ್ತು ಸುಜೂದ್‌ಗಳಾಗಲಿ ನಮಾಝ್‌ನ ನಂತರ ದುಆ ಆಗಲಿ ಇಲ್ಲ.

ಸೂರಃ ಅಲ್ ಫಾತಿಹಃ

بِسْمِ ٱللَّهِ ٱلرَّحْمَٰنِ ٱلرَّحِيمِ ﴿١﴾

ٱلْحَمْدُ لِلَّهِ رَبِّ ٱلْعَٰلَمِينَ ﴿٢﴾ ٱلرَّحْمَٰنِ ٱلرَّحِيمِ ﴿٣﴾
مَٰلِكِ يَوْمِ ٱلدِّينِ ﴿٤﴾ إِيَّاكَ نَعْبُدُ وَإِيَّاكَ نَسْتَعِينُ ﴿٥﴾
ٱهْدِنَا ٱلصِّرَٰطَ ٱلْمُسْتَقِيمَ ﴿٦﴾ صِرَٰطَ ٱلَّذِينَ أَنْعَمْتَ عَلَيْهِمْ
غَيْرِ ٱلْمَغْضُوبِ عَلَيْهِمْ وَلَا ٱلضَّآلِّينَ ﴿٧﴾

ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್

ಅಲ್‌ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್-ಅರ್ರಹ್ಮಾನಿರ್ರಹೀಮ್-ಮಾಲಿಕಿ ಯೌಮಿದ್ದೀನ್. ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್‌ತಈನ್. ಇಹ್‌ದಿನಸ್ಸಿರಾತಲ್ ಮುಸ್ತಕೀಮ್-ಸಿರಾತಲ್ಲದೀನ ಅನ್ ಅಮ್‌ತ ಅಲೈಹಿಮ್-ಗೈರಿಲ್ ಮಗ್‌ದೂಬಿ ಅಲೈಹಿಮ್. ವಲದ್ದಾಲ್ಲೀನ್.

[ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ ಅಲ್ಲಾಹನಿಗೇ ಸರ್ವಸ್ತುತಿ. ಅವನು ಸಕಲ ವಿಶ್ವದ ಪ್ರಭು. ಪರಮ ದಯಾಳು, ಕರುಣಾನಿಧಿ. ನಿರ್ಣಾಯಕ ದಿನದ ಅಧಿಪತಿ(ಆದ ಪ್ರಭುವೇ) ನಾವು ನಿನಗೆ ಮಾತ್ರ ಇಬಾದತ್(ಆರಾಧನೆ) ಮಾಡುತ್ತೇವೆ ಮತ್ತು ನಿನ್ನೊರ್ವನಿಂದ ಮಾತ್ರ ಸಹಾಯ ಬೇಡುತ್ತೇವೆ. ನಮಗೆ ಸನ್ಮಾರ್ಗವನ್ನು ತೋರಿಸು. ನೀನು ಅನುಗ್ರಹಿಸಿದವರ ಮಾರ್ಗ; ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ. (ನೀನು ತೋರಿದ) ದಾರಿಯನ್ನು ತಪ್ಪಿ ನಡೆದವರ ಮಾರ್ಗವೂ ಅಲ್ಲ.]

ಕೆಲವು ಸಣ್ಣ ಅಧ್ಯಾಯಗಳು

ಅಲ್ ಅಸ್ರ್

بِسْمِ اللّٰهِ الرَّحْمٰنِ الرَّحِيْمِ

وَالْعَصْرِ ۝١ اِنَّ الْاِنْسَانَ لَفِيْ خُسْرٍ ۝٢ اِلَّا الَّذِيْنَ اٰمَنُوْا وَعَمِلُوا الصّٰلِحٰتِ
وَتَوَاصَوْا بِالْحَقِّ ۙ وَتَوَاصَوْا بِالصَّبْرِ ۝٣

"ವಲ್ ಅಸ್ರ್. ಇನ್ನಲ್ ಇನ್ಸಾನ ಲಫೀ ಖುಸ್ರ್. ಇಲ್ಲಲ್ಲದೀನ ಆಮನೂ ವಅಮಿಲು ಸ್ವಾಲಿಹಾತಿ ವತವಾಸವ್ ಬಿಲ್ ಹಕ್ಕಿ ವತವಾಸವ್ ಬಿಸ್ಸಬ್ರ್."

[ಕಾಲದಾಣೆ, ನಿಜವಾಗಿ ಮಾನವನು ಮಹಾ ನಷ್ಟದಲ್ಲಿದ್ದಾನೆ. ಸತ್ಯವಿಶ್ವಾಸ ಸ್ವೀಕರಿಸಿದ, ಸತ್ಕರ್ಮ ಮಾಡುತ್ತಿದ್ದ ಮತ್ತು ಪರಸ್ಪರ ಸತ್ಯ ಹಾಗೂ ಸಹನೆಯನ್ನು ಉಪದೇಶಿಸುತ್ತಿದ್ದವರ ಹೊರತು.]

ಅಲ್ ಕೌಸರ್

بِسْمِ اللّٰهِ الرَّحْمٰنِ الرَّحِيْمِ

اِنَّآ اَعْطَيْنٰكَ الْكَوْثَرَ ۝١ فَصَلِّ لِرَبِّكَ وَانْحَرْ ۝٢ اِنَّ شَانِئَكَ هُوَ الْاَبْتَرُ ۝٣

"ಇನ್ನಾ ಅಅ್ತೈನಾಕಲ್ ಕೌಸರ್. ಫಸಲ್ಲಿಲಿರಬ್ಬಿಕ ವನ್‌ಹರ್. ಇನ್ನಶಾನಿಅಕ ಹುವಲ್ ಅಬ್‌ತರ್."

[(ಸಂದೇಶವಾಹಕರೇ) ನಾವು ನಿಮಗೆ ಕೌಸರ್ ದಯಪಾಲಿಸಿರುತ್ತೇವೆ. ನೀವಿನ್ನು ನಿಮ್ಮ ಪ್ರಭುವಿಗಾಗಿಯೇ ನಮಾಝ್ ನಿರ್ವಹಿಸಿರಿ ಮತ್ತು ಬಲಿದಾನ ನೀಡಿರಿ. ಖಂಡಿತವಾಗಿಯೂ ನಿಮ್ಮ ಶತ್ರುವೇ ಮೂಲ ಕಡಿಯಲ್ಪಟ್ಟವನಾಗಿದ್ದಾನೆ.]

ಅಲ್ ಕಾಫಿರೂನ್

بِسْمِ اللّٰهِ الرَّحْمٰنِ الرَّحِيْمِ ۝

قُلْ يٰٓاَيُّهَا الْكٰفِرُوْنَ ۝١ لَآ اَعْبُدُ مَا تَعْبُدُوْنَ ۝٢ وَلَآ اَنْتُمْ
عٰبِدُوْنَ مَآ اَعْبُدُ ۝٣ وَلَآ اَنَا عَابِدٌ مَّا عَبَدْتُّمْ ۝٤ وَلَآ اَنْتُمْ عٰبِدُوْنَ
مَآ اَعْبُدُ ۝٥ لَكُمْ دِيْنُكُمْ وَلِيَ دِيْنِ ۝٦

"ಕುಲ್ ಯಾ ಅಯ್ಯುಹಲ್ ಕಾಫಿರೂನ್. ಲಾ ಅಅ್‌ಬುದು ಮಾ ತಅ್‌ಬುದೂನ್. ವಲಾ ಅನ್‌ತುಮ್ ಆಬಿದೂನ ಮಾ ಅಅ್‌ಬುದು. ವಲಾ ಅನ ಆಬಿದುಮ್ಮಾ ಅಬತ್ತುಂ. ವಲಾ ಅನ್‌ತುಮ್ ಆಬಿದೂನ ಮಾ ಅಅ್‌ಬುದು. ಲಕುಮ್ ದೀನುಕುಮ್ ವಲಿಯ ದೀನ್."

[ಹೇಳಿ ಬಿಡಿರಿ, ಸತ್ಯನಿಷೇಧಿಗಳೇ ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ. ನಾನು ಆರಾಧಿಸುವವನನ್ನು ನೀವು ಆರಾಧಿಸುವುದಿಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನೂ ಮಾಡುವವನಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ.]

ಅನ್ನಸ್ರ್

بِسْمِ اللّٰهِ الرَّحْمٰنِ الرَّحِيْمِ ۝

اِذَا جَآءَ نَصْرُ اللّٰهِ وَالْفَتْحُ ۝١ وَرَاَيْتَ النَّاسَ يَدْخُلُوْنَ فِيْ دِيْنِ اللّٰهِ
اَفْوَاجًا ۝٢ فَسَبِّحْ بِحَمْدِ رَبِّكَ وَاسْتَغْفِرْهُ ؕ اِنَّهٗ كَانَ تَوَّابًا ۝٣

"ಇದಾ ಜಾಅ ನಸ್ರುಲ್ಲಾಹಿ ವಲ್ ಫತ್‌ಹ್. ವರಅಯ್‌ತನ್ನಾಸ ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್‌ವಾಜಾ. ಫಸಬ್ಬಿಹ್ ಬಿಹಮ್ದಿ ರಬ್ಬಿಕ ವಸ್‌ತಗ್‌ಫಿರುಹು ಇನ್ನಹೂ ಕಾನ ತವ್ವಾಬಾ."

[ಅಲ್ಲಾಹನ ಸಹಾಯ ಬಂದು ಬಿಟ್ಟಾಗ ಮತ್ತು ವಿಜಯ ಪ್ರಾಪ್ತವಾದಾಗ- ಮತ್ತು (ಸಂದೇಶವಾಹಕರೇ) ಜನರು ತಂಡೋಪತಂಡವಾಗಿ ಅಲ್ಲಾಹನ ಧರ್ಮದಲ್ಲಿ ಪ್ರವೇಶಿಸುತ್ತಿರುವುದನ್ನು ನೀವು ಕಂಡಾಗ- ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನ ಕೀರ್ತನೆ ಮಾಡಿರಿ ಮತ್ತು ಅವನೊಡನೆ ಕ್ಷಮೆ ಯಾಚಿಸಿರಿ. ನಿಸ್ಸಂದೇಹವಾಗಿಯೂ ಅವನು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನಾಗಿರುತ್ತಾನೆ.]

ಅಲ್ಲಹಬ್

بِسۡمِ اللّٰہِ الرَّحۡمٰنِ الرَّحِیۡمِ○

تَبَّتۡ یَدَاۤ اَبِیۡ لَہَبٍ وَّتَبَّ ؕ﴿۱﴾ مَاۤ اَغۡنٰی عَنۡہُ مَالُہٗ وَمَا کَسَبَ ؕ﴿۲﴾

سَیَصۡلٰی نَارًا ذَاتَ لَہَبٍ ﴿ۚۖ۳﴾ وَّامۡرَاَتُہٗ ؕ حَمَّالَۃَ الۡحَطَبِ ﴿ۚ۴﴾

فِیۡ جِیۡدِہَا حَبۡلٌ مِّنۡ مَّسَدٍ ﴿۵﴾

"ತಬ್ಬತ್‌ಯದಾ ಅಬೀಲಹಬಿಂ ವತಬ್ಬ್. ಮಾ ಅಗ್‌ನಾ ಅನ್‌ಹು ಮಾಲುಹೂ ವಮಾ ಕಸಬ್. ಸಯಸ್‌ಲಾ ನಾರನ್ ದಾತಲಹಬಿಂ ವಮ್‌ರಅತುಹೂ ಹಮ್ಮಾಲತಲ್‌ಹತಬ್. ಫೀ ಜೀದಿಹಾ ಹಬ್‌ಲುಂ ಮಿನ್‌ಮ್ಮಸದ್."

[ಅಬೂಲಹಬನ ಕೈಗಳು ಮುರಿದು ಹೋದುವು ಮತ್ತು ಅವನು ನಾಶವಾದನು. ಅವನ ಸಂಪತ್ತಾಗಲಿ ಅವನ ಸಂಪಾದನೆಯಾಗಲಿ ಅವನ ಯಾವ ಕೆಲಸಕ್ಕೂ ಬರಲಿಲ್ಲ. ಖಂಡಿತವಾಗಿಯೂ ಅವನು ಧಗಧಗಿಸುವ ಅಗ್ನಿಯಲ್ಲಿ ಹಾಕಲ್ಪಡುವನು ಮತ್ತು ಅವನ ಜೊತೆ ಕುಪ್ರಚಾರಕಳಾದ ಅವನ ಪತ್ನಿ ಕೂಡಾ. ಅವಳ ಕೊರಳಲ್ಲಿ ದರ್ಬೆ ಹುಲ್ಲಿನ ಹಗ್ಗವಿರುವುದು.]

ಅಲ್ ಇಖ್‌ಲಾಸ್

بِسۡمِ اللّٰہِ الرَّحۡمٰنِ الرَّحِیۡمِ○

قُلۡ ہُوَ اللّٰہُ اَحَدٌ ۚ﴿۱﴾ اَللّٰہُ الصَّمَدُ ۚ﴿۲﴾ لَمۡ یَلِدۡ ۬ۙ وَلَمۡ یُوۡلَدۡ ۙ﴿۳﴾

وَلَمۡ یَکُنۡ لَّہٗ کُفُوًا اَحَدٌ ﴿۴﴾

"ಕುಲ್ ಹುವಲ್ಲಾಹು ಅಹದ್. ಅಲ್ಲಾಹುಸ್ಸಮದ್. ಲಮ್‌ಯಲಿದ್. ವಲಮ್ ಯೂಲದ್. ವಲಮ್ ಯಕುಲ್ಲಹೂ ಕುಫುವನ್ ಅಹದ್."

[ಹೇಳಿರಿ- ಅವನು ಅಲ್ಲಾಹನು ಏಕೈಕನು. ಅವನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವ ಸಂತಾನವೂ ಇಲ್ಲ, ಅವನು ಯಾರ ಸಂತಾನವೂ ಅಲ್ಲ ಮತ್ತು ಆತನಿಗೆ ಯಾರೂ ಸರಿ ಸಮಾನರಿಲ್ಲ.]

ಅಲ್ ಫಲಕ್

بِسْمِ اللّٰهِ الرَّحْمٰنِ الرَّحِيْمِ

قُلْ اَعُوْذُ بِرَبِّ الْفَلَقِ ﴿١﴾ مِنْ شَرِّ مَا خَلَقَ ﴿٢﴾ وَمِنْ شَرِّ غَاسِقٍ اِذَا وَقَبَ ﴿٣﴾ وَمِنْ شَرِّ النَّفّٰثٰتِ فِى الْعُقَدِ ﴿٤﴾ وَمِنْ شَرِّ حَاسِدٍ اِذَا حَسَدَ ﴿٥﴾

"ಕುಲ್ ಅಊದು ಬಿರಬ್ಬಿಲ್ ಫಲಕ್. ಮಿನ್ ಶರ್ರಿಮಾ ಖಲಕ್. ವಮಿನ್ ಶರ್ರಿ ಗಾಸಿಕಿನ್ ಇದಾ ವಕಬ್. ವಮಿನ್ ಶರ್ರಿ ನ್ನಫ್ಫಾಸಾತಿ ಫಿಲ್ ಉಕದ್. ವಮಿನ್ ಶರ್ರಿ ಹಾಸಿದಿನ್ ಇದಾ ಹಸದ್."

[ಹೇಳಿರಿ- ನಾನು ಮುಂಜಾವಿನ ಪ್ರಭುವಿನ ಅಭಯ ಯಾಚಿಸುತ್ತೇನೆ. ಅವನು (ಅಲ್ಲಾಹನು) ಸೃಷ್ಟಿಸಿದ ಸಕಲ ವಸ್ತುಗಳ ಕೇಡಿನಿಂದ. ಇರುಳಿನ ಅಂಧಕಾರವು ಕವಿದಾಗ ಉಂಟಾಗುವ ಕೇಡಿನಿಂದ. ಗಂಟುಗಳ ಮೇಲೆ ಊದುವವರ (ಅಥವಾ ಹಾಗೆ ಊದುವ ಸ್ತ್ರೀಯರ) ಕೇಡಿನಿಂದ ಮತ್ತು ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಭಯ ಯಾಚಿಸುತ್ತೇನೆ.)]

ಅನ್ನಾಸ್

بِسْمِ اللّٰهِ الرَّحْمٰنِ الرَّحِيْمِ

قُلْ اَعُوْذُ بِرَبِّ النَّاسِ ﴿١﴾ مَلِكِ النَّاسِ ﴿٢﴾ اِلٰهِ النَّاسِ ﴿٣﴾ مِنْ شَرِّ الْوَسْوَاسِ ﴿٤﴾ الْخَنَّاسِ ﴿٤﴾ الَّذِىْ يُوَسْوِسُ فِىْ صُدُوْرِ النَّاسِ ﴿٥﴾ مِنَ الْجِنَّةِ وَالنَّاسِ ﴿٦﴾

"ಕುಲ್ ಅಊದು ಬಿರಬ್ಬಿನ್ನಾಸ್. ಮಲಿಕಿನ್ನಾಸ್. ಇಲಾಹಿನ್ನಾಸ್. ಮಿನ್ ಶರ್ರಿಲ್ ವಸ್‌ವಾಸಿಲ್ ಖನ್ನಾಸ್. ಅಲ್ಲದೀ ಯುವಸ್‌ವಿಸು ಫೀ ಸುದೂರಿನ್ನಾಸ್. ಮಿನಲ್ ಜಿನ್ನತಿ ವನ್ನಾಸ್."

[ಹೇಳಿರಿ- ನಾನು ಮಾನವರ ಪ್ರಭು, ಮಾನವರ ಸಾಮ್ರಾಟ, ಮಾನವರ ನೈಜ ಆರಾಧ್ಯನ ಅಭಯ ಯಾಚಿಸುತ್ತೇನೆ- ಪದೇ ಪದೇ ಬಂದು ದುಷ್ಪ್ರೇರಣೆ ನೀಡುವವನ ಕೇಡಿನಿಂದ. ಜನರ ಮನಸ್ಸುಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನ ಕೇಡಿನಿಂದ- ಅದು ಜಿನ್ನ್‌ಗಳ ಪೈಕಿಯಾಗಿರಲಿ. ಮಾನವರ ಪೈಕಿಯಾಗಿರಲಿ.]